ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 | ಸಂಚಿಕೆ 4 | 8, ಏಪ್ರಿಲ್ 1979 | 40 ಪೈಸೆ

ಬಸ್ ದರ ಏರಿಕೆ ವಿರುದ್ಧ

ರಾಜ್ಯದಾದ್ಯಂತ ಪ್ರತಿಭಟನೆ, ಬಂಧನ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು, ರಾಜ್ಯಸರಕಾರದ ಅನುಮತಿ ಪಡೆದು ಬಸ್ ಪ್ರಯಾಣ ದರವನ್ನು ಏಪ್ರಿಲ್ ಒಂದರಿಂದ ಸುಮಾರು ಶೇ. 30 ರಿಂದ 40 ರಷ್ಟು ಹೆಚ್ಚಿಸಲು ತೀರ್ಮಾನಿಸಿತ್ತು. ಮಾರ್ಚ್ 15 ರಿಂದ ನಗರ ಸಾರಿಗೆ ಬಸ್ ಪ್ರಯಾಣದ ದರವನ್ನು ಹೆಚ್ಚಿಸಲಾಗಿತ್ತು. ಸರಕಾರದ ಈ ಜನ ವಿರೋಧಿ ಧೋರಣೆಯನ್ನು ಪ್ರತಿಭಟಿಸಲು, ಪ್ರಯಾಣದರ ಹೆಚ್ಚಳದ ಯೋಜನೆಯನ್ನು ಕೈಬಿಡಲು ಸರಕಾರವನ್ನು ಒತ್ತಾಯಿಸಲು ಏಪ್ರಿಲ್ ಒಂದರಂದು ರಾಜ್ಯದಾದ್ಯಂತ ಪ್ರತಿಭಟನಾ ಮೆರವಣಿಗೆ, ಪಿಕೆಟಿಂಗ್ ಮಾಡಲು ಪಕ್ಷದ ರಾಜ್ಯಸಮಿತಿ, ಸಿ. ಐ. ಟಿ. ಯು. ರಾಜ್ಯಸಮಿತಿ ಮತ್ತು ಎಸ್. ಎಫ್. ಐ. ರಾಜ್ಯಸಮಿತಿಗಳು ಕರೆ ನೀಡಿದ್ದುವು.

ಪಾರ್ಟಿ ಮತ್ತು ಸಾಮೂಹಿಕ ಸಂಘಟನೆಗಳ ಕರೆ ಮೇರೆಗೆ ಏಪ್ರಿಲ್ ಒಂದರಂದು ರಾಜ್ಯದ ಬೇರೆ ಬೇರೆ ಕೇಂದ್ರಗಳಲ್ಲಿ ಪ್ರತಿಭಟನಾ ಮೆರವಣಿಗೆ, ಸಭೆ, ಪಿಕೆಟಿಂಗ್ ನಡೆದವು. ರಾಜ್ಯಸಮಿತಿ ಕೇಂದ್ರಕ್ಕೆ ಬಂದ ವರದಿಯ ಪ್ರಕಾರ ಸುಮಾರು ನಾನ್ನೂರಕ್ಕಿಂತಲೂ ಹೆಚ್ಚಿಗೆ ಪಕ್ಷದ ಕಾರ್ಯಕರ್ತರನ್ನು ಬಂಧಿಸಲಾಯ್ತು. ಬೆಂಗಳೂರು ನಗರ, ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಕೆ. ಜಿ. ಎಫ್, ತುಮಕೂರು, ಶಿವಮೊಗ್ಗ, ಮೈಸೂರು, ದ. ಕ ಜಿಲ್ಲೆಯ ಮಂಗಳೂರು, ಸುಳ್ಯ, ಪುತ್ತೂರು ಮತ್ತಿತರ ಕೇಂದ್ರಗಳು; ಕೊಡಗು ಜಿಲ್ಲೆಯ ವಿರಾಜಪೇಟೆ; ಚಿಕ್ಕಮಗಳೂರು; ಉತ್ತರ ಕರ್ನಾಟಕದ ಕೆಲವೆಡೆ– ಹೀಗೆ ಬೇರೆ ಬೇರೆ ಪ್ರದೇಶಗಳಲ್ಲಿ ಪ್ರತಿಭಟನಾ ಮೆರವಣಿಗೆ ಮತ್ತು ಪಿಕೆಂಟಿಗ್ ನಡೆಯಿತು.

ಬಂಧನಕ್ಕೊಳಗಾದವರ ವಿವರ:

ಮೈಸೂರು–10; ತುಮಕೂರು–27 (ಇಬ್ಬರು ಮಹಿಳೆಯರು); ಚಿಕ್ಕಬಳ್ಳಾಪುರ–57 (ಹದಿನೆಂಟು ಮಂದಿ ಮಹಿಳೆಯರು); ಕೆ. ಜಿ. ಎಫ್.– 180; ಶಿಡ್ಲಘಟ್ಟ– 12; ಶಿವಮೊಗ್ಗ– 17; ಮಂಗಳೂರು–60; ಸುಳ್ಯ– 23 (ಮಹಿಳೆಯರೂ ಸೇರಿ); ಇನ್ನು ಕೆಲವೆಡೆ ಬಂಧನಗಳಾದ ವರದಿ ಬಂದಿದೆ. ವಿವರ ದೊರೆತಿಲ್ಲ. ಬೇರೆ ಬೇರೆ ಕಡೆ ನಡೆಸಿದ ಪಿಕೆಟಿಂಗ್ ಕಾರ್ಯಕ್ರಮದ ಮೂಲಕ ಹಲವೆಡೆ ಕೆಲವು ಘಂಟೆಗಳಕಾಲ ಬಸ್‌ಗಳನ್ನು ತಡೆಹಿಡಿಯಲಾಗಿತ್ತು. ಬಂಧನಕ್ಕೊಳಗಾದವರಲ್ಲಿ ಕಾಂ. ಕೆ.ಆರ್. ನಾಯಕ್, ಕಾಂ. H. C. ಚೆನ್ನಪ್ಪ, ಕಾಂ. ಮಹಮ್ಮದ್ ದಸ್ತಗೀರ್, ಕಾಂ. T. L. ತಿಮ್ಮಪ್ಪ, ಕಾಂ. ಚಂದುಕುಟ್ಟಿ, ಕಾಂ. ಉಗ್ರಪ್ಪ, ಕಾಂ. ದೊರೆಸ್ವಾಮಿ, ಕಾಂ. ಲಕ್ಕಯ್ಯ, ಕಾಂ. ಸವರಿದಾಸ್, ಕಾಂ. ಮಣಿ, ಮೊದಲಾದ ಮುಖಂಡರುಗಳು ಸೇರಿದ್ದರು. ಬಂಧನಕ್ಕೊಳಗಾದವರಲ್ಲಿ ಎಸ್. ಎಫ್. ಐ. ಮತ್ತು ಸಿ. ಐ. ಟಿ. ಯು. ಕಾರ್ಯಕರ್ತರುಗಳೂ ಸೇರಿದ್ದರು. ಪ್ರತಿಭಟನಾ ಕಾರ್ಯಕ್ರಮಕ್ಕೆ ಜನತೆಯ ಸಂಪೂರ್ಣ ಬೆಂಬಲ ದೊರೆತಿತ್ತು. ▭

ಕನಿಷ್ಟ ವೇತನ ಏರಿಕೆ

ಸಂಪಾದಕೀಯ

ರಾಜ್ಯದಲ್ಲಿ ಬೀಡಿ ಕೈಗಾರಿಕೆಯಲ್ಲಿ ನಿರತರಾಗಿರುವ ಕಾರ್ಮಿಕರು; ಸಣ್ಣಪುಟ್ಟ ತೋಟಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು; ಸಣ್ಣಪುಟ್ಟ ಫೌಂಡ್ರಿಗಳು, ಮೋಟಾರು ವಾಹನಗಳ ರಿಪೇರಿ ಹಾಗೂ ಸಣ್ಣ ಎಂಜಿನೀಯರಿಂಗ್ ಕೈಗಾರಿಕೆಗಳ ಕಾರ್ಮಿಕರು–ಹೀಗೆ ಅಸಂಘಟಿತ ವಿಭಾಗಗಳಿಗೆ ಸೇರಿದ ಲಕ್ಷಾಂತರ ಮಂದಿ ಕಾರ್ಮಿಕರ ಕನಿಷ್ಟ ವೇತನ ಮಟ್ಟದ ಪರಿಷ್ಕರಣ ಮಾಡಿ ರಾಜ್ಯಸರ್ಕಾರ ಮಾರ್ಚ್ 30ರಂದು ಆಜ್ಞೆ ಹೊರಡಿಸಿದೆ. ಸರಕಾರದ ಲೆಕ್ಕ ಪ್ರಕಾರವೇ ಈ ಆಜ್ಞೆಯಿಂದ ಬೀಡಿ ಕೈಗಾರಿಕೆಯಲ್ಲಿ ನಿರತರಾಗಿರುವ ಸುಮಾರು ಎರಡು ಲಕ್ಷ, ಸಣ್ಣಪುಟ್ಟ ತೋಟದ ಸುಮಾರು ಎಪ್ಪತ್ತೈದು ಸಾವಿರ ಮತ್ತು ಎಂಜಿನೀಯರ್ರಿಂಗ್ ವಿಭಾಗದ ಎಪ್ಪತ್ತೈದು ಸಾವಿರ ಕಾರ್ಮಿಕರಿಗೆ ಅನುಕೂಲವಾಗಲಿದೆ.

ಬೀಡಿ ಕೈಗಾರಿಕೆ, ತೋಟ ಕೆಲಸಗಾರರು ಮತ್ತು ಎಂಜಿನೀಯರಿಂಗ್ ಉದ್ಯಮಗಳಿಗೆ ಸೇರಿದ ಲಕ್ಷಾಂತರ ಮಂದಿ ಅಸಂಘಟಿತ ಕಾರ್ಮಿಕರ ಕನಿಷ್ಟ ವೇತನ ಮಟ್ಟವನ್ನು ಏರಿಸಬೇಕೆಂಬುದು ಸಿ.ಐ.ಟಿ.ಯು. ವಿನ ಬೇಡಿಕೆಯಾಗಿತ್ತು. ಈ ಬೇಡಿಕೆ ಮತ್ತು ಇನ್ನಿತರ ಸಮಸ್ಯೆಗಳ ಪರಿಹಾರಕ್ಕಾಗಿ ಸಿ.ಐ.ಟಿ.ಯು. ಮುಖಂಡತ್ವದ ರಾಜ್ಯ ಬೀಡಿ ಕೆಲಸಗಾರರ ಫೆಡರೇಷನ್ ರಾಜ್ಯದಾದ್ಯಂತ ತೀವ್ರ ಚಳುವಳಿಯನ್ನು ನಡೆಸುವ ನಿರ್ಧಾರ ಮಾಡಿತ್ತು. ಸರಕಾರದ ಭರವಸೆ ಮೇಲೆ ಚಳುವಳಿಯನ್ನು ಎರಡು ತಿಂಗಳುಗಳ ಕಾಲ ಮುಂದೂಡಲಾಗಿತ್ತು. ಸಣ್ಣಪುಟ್ಟ ಎಂಜಿನೀಯರಿಂಗ್ ಕಾರ್ಮಿಕರ ಸಮಾವೇಷ ಮತ್ತು ಹೋರಾಟಗಳನ್ನು ನಡೆಸಲಾಗಿತ್ತು. ಬೆಂಗಳೂರಿನ ಕೃಷ್ಣರಾಜಪುರ ಪ್ರದೇಶದಲ್ಲಿ ನಡೆದ ಸಮ್ಮೇಳನವು ಒಂದು ಉದಾಹರಣೆ. ಕಾರ್ಮಿಕರ ಹೋರಾಟದ ಫಲವಾಗಿ ಇದೀಗ ಸ್ವಲ್ಪಮಟ್ಟಿಗೆ ಕನಿಷ್ಟವೇತನ ಮಟ್ಟದ ಏರಿಕೆಯಾಗಿದೆ.

ರಾಜ್ಯದ ವಿವಿಧ ಕೈಗಾರಿಕಾ ಕ್ಷೇತ್ರಗಳಲ್ಲಿ ಕಾರ್ಮಿಕರ ವರ್ಗಕ್ಕೆ ನ್ಯಾಯ ದೊರಕಿಸಿ ಕೈಗಾರಿಕಾ ಶಾಂತಿ ಉಳಿಸಿಕೊಳ್ಳುವ ಗುರಿಸಾಧನೆಯಲ್ಲಿ ಕನಿಷ್ಟ ವೇತನ ಮಟ್ಟಗಳ ಪರಿಷ್ಕರಣ ಮುಖ್ಯ ಹೆಜ್ಜೆ ಎಂದು ರಾಜ್ಯದ ಕಾರ್ಮಿಕ ಸಚಿವ ಶ್ರೀ ಆರ್. ಎಸ್. ಪಾಟೀಲರು ಅಂದಿದ್ದಾರೆ. "ನೆಮ್ಮದಿಯ ಹೊಸ ಅಧ್ಯಾಯವನ್ನಾರಂಭಿಸಿದ ರಾಜ್ಯಸರಕಾರದ ಸಾಧನೆಗೆ ಇಂದು ಹೊರಡಿಸಿದ ಆಜ್ಞೆಗಳು ಕಳಶಪ್ರಾಯವಾಗಿವೆಯೆಂದು ಕಾರ್ಮಿಕ ಕಮಿಷನರ್ ಶ್ರಿ ಪಿ. ಡಿ. ಶೆಣೈ ವರ್ಣಿಸಿದರು.

ಮೊದಲನೆಯದಾಗಿ, ರಾಜ್ಯದಲ್ಲಿ ಮೇಲಿನ ಕೈಗಾರಿಕೆಗಳಲ್ಲಿ ದುಡಿಯುವ ಕಾರ್ಮಿಕರು ಸರಕಾರ ಹೇಳುವ ಪ್ರಕಾರ ಸುಮಾರು ಮೂರುವರೆಲಕ್ಷವಲ್ಲ; ಬದಲು ಸುಮಾರು ಆರುಲಕ್ಷಕ್ಕಿಂತಲೂ ಹೆಚ್ಚು. ಎರಡನೆಯದಾಗಿ, ಸರಕಾರ ಮಾರ್ಚ್ 30 ರಂದು ಆಜ್ಞೆಯನ್ನೇನೋ ಹೊರಡಿಸಿದೆ; ಆದರೆ ಯಾವತ್ತಿನಿಂದ ಇದನ್ನು ಜಾರಿಗೊಳಿಸಬೇಕೆಂಬುದರ ಬಗ್ಗೆ ಏನೂ ಹೇಳಿಲ್ಲ. ಮೂರನೆ

(8ನೇ ಪುಟನೋಡಿ)

ಗೌಹಾತಿ ಕಾರ್ಪೊರೇಷನ್ ಚುನಾವಣೆ ಸಿ. ಪಿ. ಐ. (ಎಂ) ಪ್ರಚಂಡ ವಿಜಯ

ಅಸ್ಸಾಂ ರಾಜ್ಯದ ರಾಜಧಾನಿಯಾದ ಗೌಹಾತಿ ಕಾರ್ಪೊರೇಷನ್ನಿಗೆ ನಡೆದ ಇತ್ತೀಚಿನ ಚುನಾವಣೆಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಪ್ರಚಂಡ ವಿಜಯ ಸಾಧಿಸಿ ಅಲ್ಲಿನ ರಾಜಕೀಯ ನಕಾಶೆಯಲ್ಲಿ ಒಂದು ಪ್ರಮುಖ ರಾಜಕೀಯ ಪಕ್ಷವಾಗಿ ಹೊರಹೊಮ್ಮಿದೆ.

ಕಾರ್ಪೊರೇಷನ್ನಿನ ಒಟ್ಟು 34 ಸ್ಥಾನಗಳ ಪೈಕಿ ಸಿ. ಪಿ. ಐ. (ಎಂ) 12 ಸ್ಥಾನಗಳನ್ನು ಪಡೆದರೆ ಅದರ ಸಮೀಪ ಸ್ಪರ್ಧಿಯಾದ ಜನತಾಪಕ್ಷವು ಕೇವಲ 6 ಸ್ಥಾನಗಳನ್ನು ಮಾತ್ರ ಪಡೆದಿದೆ.

ಸುಮಾರು ಒಂದುವರೆಲಕ್ಷದಷ್ಟು ಮತದಾರರಿರುವ ಗೌಹಾತಿಯಲ್ಲಿ ಶೇ. 55ರಿಂದ 60ರಷ್ಟು ಮತದಾನವಾಗಿದ್ದು, ಕಾಂಗ್ರೆಸ್ ಪಕ್ಷವನ್ನುಳಿದು ಇತರೆಲ್ಲಾ ಪ್ರಮುಖ ರಾಜಕೀಯ ಪಕ್ಷಗಳು ಚುನಾವಣೆಯಲ್ಲಿ ಸ್ಪರ್ಧಿಸಿದ್ದವು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು 15 ಸ್ಥಾನಗಳಿಗೆ ಸ್ಪರ್ಧಿಸಿ ನಾಲ್ವರು ಪಕ್ಷೇತರ ಅಭ್ಯರ್ಥಿಗಳಿಗೆ ಬೆಂಬಲ ಕೊಟ್ಟು ಒಟ್ಟು 12 ಸ್ಥಾನಗಳನ್ನು ಗಳಿಸಿದೆ. ಕಾರ್ಪೊರೇಷನ್ನಿನ ಎಲ್ಲಾ 34 ಸ್ಥಾನಗಳಿಗೂ ಸ್ಪರ್ಧಿಸಿದ್ದ ಜನತಾ ಪಕ್ಷವು ಕೇವಲ 6 ಸ್ಥಾನಗಳನ್ನೂ, 17 ಸ್ಥಾನಗಳಿಗೆ ಸ್ಪರ್ಧಿಸಿದ್ದ ಇಂದಿರಾ ಕಾಂಗ್ರೆಸ್ 2 ಸ್ಥಾನಗಳನ್ನೂ, 9 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಸಿ. ಪಿ. ಐ. 1 ಸ್ಥಾನವನ್ನೂ ಪಡೆದಿವೆ. ಪಕ್ಷೇತರ ಅಭ್ಯರ್ಥಿಗಳು 8 ಸ್ಥಾನಗಳನ್ನು ಪಡೆದುಕೊಂಡಿದ್ದಾರೆ. ಎಸ್. ಯು. ಸಿ. ಐ., ಸಿ. ಪಿ. ಐ. (ಎಂ. ಎಲ್.), ಆರ್. ಎಸ್. ಪಿ. ಮುಂತಾದ ಪಕ್ಷಗಳು ಒಂದು ಸ್ಥಾನವನ್ನೂ ಪಡೆದಿಲ್ಲ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವಿರೋಧಿ ರಂಗವಾದ ಅಸ್ಸಾಂ ಜಾತೀಯವಾದಿ ದಳ್ ಎಂಬ ಶಿವಸೇನೆ ಮಾದರಿಯ ಭಾಷಾಂಧ ಹಾಗೂ ತೀವ್ರ ಬಲ ಪ್ರತಿಗಾಮಿ ಬಣವು 5 ಸ್ಥಾನಗಳನ್ನು ಪಡೆದ ಸ್ಥಳೀಯ ಮುಖ್ಯ ರಾಜಕೀಯ ಪಕ್ಷವಾಗಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವಿರೋಧಿ ಗುಂಪಾದ ಇದು ಇಲ್ಲಿನ ಸ್ಥಳೀಯ ರಾಜಕೀಯದಲ್ಲಿ ಹೊಸ ಸಂಗತಿಯಾಗಿದೆ.

ಚುನಾವಣೆಗೆ ಮುನ್ನ ಮತ್ತು ಚುನಾವಣಾಪ್ರಚಾರ ಕಾಲದಲ್ಲಿಯೂ ಸಹ ಜನತಾಪಕ್ಷದೊಡನೆ ಹೊಂದಾಣಿಕೆ ಮಾಡಿಕೊಳ್ಳಲು ಸಿ. ಪಿ. ಐ. (ಎಂ) ಪ್ರಯತ್ನಿಸಿದಾಗ ಅದಕ್ಕೆ ಜನತಾಪಕ್ಷವು ಕಿವಿಕೊಡಲಿಲ್ಲ. ಇದರಿಂದಾಗಿ ಜನತಾ ಪಕ್ಷವು ಸಾಕಷ್ಟು ಪೆಟ್ಟು ತಿನ್ನಬೇಕಾಯಿತು.

ಪ್ರಜಾಪ್ರಭುತ್ವಶಕ್ತಿಗಳ ಐಕ್ಯತೆಯನ್ನು ಹಿಂದೆ ಸರಿಸಿದರೆ ಪರಿಣಾಮ ಏನಾಗಬಲ್ಲದು ಎಂಬುದಕ್ಕೆ ತನ್ನದೇ ರಾಜ್ಯ ಸರ್ಕಾರವಿರುವ ರಾಜ್ಯವೊಂದರ ರಾಜಧಾನಿಯಲ್ಲಿ ಜನತಾಪಕ್ಷವು ಅನುಭವಿಸಿದ ಸೋಲು ಅದಕ್ಕೊಂದು ಮುಖ್ಯ ಪಾಠವಾಗಿದೆ.

ಸಿ. ಪಿ. ಐ.ನೊಂದಿಗೆ ಭಾಗಷಃ ಹೊಂದಾಣಿಕೆಯನ್ನು ಸಿ. ಪಿ. ಐ. (ಎಂ) ಈ ಚುನಾವಣೆಗಳಲ್ಲಿ ಮಾಡಿಕೊಂಡಿತ್ತು.

ಕಾರ್ಪೊರೇಷನ್ನಿನ ಮೇಯರ್ ಚುನಾವಣೆಗೆ ಇದುವರೆಗೆ ಯಾವ ರಾಜಕೀಯ ಪಕ್ಷವೂ ಮುಂದೆ ಬಂದಿಲ್ಲ. ಈ ತಿಂಗಳ ಎರಡನೇ ವಾರದಲ್ಲಿ ಹೊಸದಾಗಿ ಚುನಾಯಿತವಾಗಿರುವ ಸದಸ್ಯರು ತಮ್ಮ ಪ್ರಥಮ ಸಭೆ ಸೇರಲಿದ್ದಾರೆ.

ಚುನಾವಣಾ ಹೊಂದಾಣಿಕೆಗೆ ಕಿವಿಗೊಡದಿದ್ದ ಜನತಾಪಕ್ಷ ಮತ್ತು 8 ಜನ ಪಕ್ಷೇತರರು ಮೇಯರ್ ಚುನಾವಣೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿವೆ. ಗೌಹಾತಿ ಜನತೆಗೆ ತಾನು ಕೊಟ್ಟಿರುವ ಕಾರ್ಯಕ್ರಮದ ಆಧಾರದಮೇಲೆ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳೊಡಗೂಡಿ ಗೌಹಾತಿ ಕಾರ್ಪೊರೇಷನ್ ಆಡಳಿತವನ್ನು ವಹಿಸಿಕೊಳ್ಳಲು ಸಿ. ಪಿ. ಐ. (ಎಂ) ನಿರ್ಧರಿಸಿದೆ.

ಕಾಂಗ್ರೆಸ್ (ಐ) ಅನ್ನು ಧೂಳೀಪಟ ಮಾಡಿ ಹೊಸದೊಂದು ಪ್ರಗತಿಪರ ತಿರುವನ್ನು ಉಂಟುಮಾಡಿರುವ ಗೌಹಾತಿ ನಾಗರೀಕರಿಗೆ ತಾನು ದಕ್ಷ ಹಾಗು ಉತ್ತಮ ಆಡಳಿತವನ್ನು ನೀಡುತ್ತೇನೆಂದಿರುವ ಸಿ. ಪಿ. ಐ. (ಎಂ)

(8ನೇ ಪುಟನೋಡಿ)

ಹಳಿಯಾಳದಲ್ಲಿ ರೈತರ ಬಹಿರಂಗ ಸಭೆ

ರೈತರ ಮೇಲಿನ ಸಾಲ ವಜಾಮಾಡಲು ಆಗ್ರಹ

ವರದಿ : ಹಿರೇಮಠ್

ಬಡ ರೈತರ ಮೇಲಿನ ಎಲ್ಲಾ ಸಾಲಗಳನ್ನು ವಜಾಮಾಡಬೇಕೆಂದು ಇತ್ತೀಚೆಗೆ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದಲ್ಲಿ ಸೇರಿದ್ದ ರೈತರ ಬಹಿರಂಗ ಸಭೆಯಲ್ಲಿ ಆಗ್ರಹಪಡಿಸಲಾಯಿತು.

ರೈತರ ಸಾಲದ ಮರುಪಾವತಿಗಾಗಿ ರೈತರ ಮನೆಗಳನ್ನು ಜಪ್ತಿ ಮಾಡಿದ ಇಲ್ಲಿನ ಕೆ.ಡಿ.ಸಿ.ಸಿ. ಬ್ಯಾಂಕ್ ಅಧಿಕಾರಿಗಳ ಕ್ರಮವನ್ನು ಸಭೆಯು ಖಂಡಿಸಿತು. ಜಪ್ತಿ ಮಾಡಲಾದ ವಸ್ತುಗಳನ್ನು ವಾಪಸ್ಸು ಕೊಡಿಸುವಲ್ಲಿ ಯಶಸ್ವಿಯಾದ ಸೇವಾಸಹಕಾರ ಸಂಘದ ಅಧ್ಯಕ್ಷ ಶ್ರೀ ಬಸಣ್ಣ ಪಟ್ಟೇಕರರಿಗೆ ಸಭೆಯು ವಂದಿಸಿತು.

ಸುಮಾರು ಒಂದುಸಾವಿರಕ್ಕಿಂತಲೂ ಅಧಿಕ ಸಂಖ್ಯೆಯಲ್ಲಿ ನೆರೆದಿದ್ದ ಸುತ್ತಮುತ್ತಲ ರೈತರನ್ನು ಉದ್ದೇಶಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿಯ ಸದಸ್ಯ ಶ್ರೀ ಆರ್. ಜಿ. ಸ್ಥಳೇಕರ್ ಅವರು ಮಾತನಾಡಿ ದೇಶದಲ್ಲಿ ಮಾಡಲಾಗುತ್ತಿರುವ ಭೂಸುಧಾರಣೆಗಳು ಮೋಸದಿಂದ ಕೂಡಿರುವಂತಹವುಗಳೆಂದೂ ಜಮೀನ್ದಾರರು ಭೂಮಿಯನ್ನು ಉಳಿಸಿಕೊಳ್ಳಲು ಸರ್ಕಾರ ಮಾಡಿರುವ ಶಾಸನಗಳಲ್ಲಿ ಒಳತಂತ್ರಗಳು ಇವೆ ಎಂದು ಹೇಳಿದರು. ಸರ್ಕಾರದ ಜನವಿರೋಧಿ ಶಾಸನಗಳ ವಿರುದ್ಧ ರೈತರು ಬಂಡೇಳಬೇಕೆಂದು ಅವರು ಕರೆ ನೀಡಿದರು.

ಸಭೆಯನ್ನು ಉದ್ದೇಶಿಸಿ ಸೇವಾ ಸಹಕಾರ ಸಂಘದ ಅಧ್ಯಕ್ಷ ಶ್ರೀ ಬಸಣ್ಣ ಪಟ್ಟೇಕರ್, ಎಸ್. ಎಫ್. ಐ. ನಾಯಕ ಶ್ರೀ ಜಿ. ಎ. ಹಿರೇಮಠ ಮತ್ತು ಇಲ್ಲಿನ ವಕೀಲರಾದ ಶ್ರೀ ವಿ. ಎನ್. ಶೆಟ್ಟಿಯವರು ಮಾತನಾಡಿದರು. ಶ್ರೀ ಉಡಚಪ್ಪಬೋಬಾಟಿ ಸ್ವಾಗತಿಸಿದರು. —

ಸಾಮಿಲ್ ಮತ್ತು ಜನರಲ್ ವರ್ಕರ್ಸ್ ಸಭೆ

ದಿನಾಂಕ 1-4-1979 ರಂದು ಚಿಕ್ಕಮಗಳೂರು ಹಾಸನ ಜಿಲ್ಲಾ ಸಾಮಿಲ್ಸ್ ಅಂಡ್ ಜನರಲ್ ವರ್ಕರ್ಸ್ ಯೂನಿಯನ್ನಿನ ಕಾರ್ಯಕಾರಿ ಸಮಿತಿಯ ವಿಸ್ತೃತ ಸಭೆಯು ಸಂಘದ ಅಧ್ಯಕ್ಷರಾದ ಕಾಂ. ಸಿ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಚಿಕ್ಕಮಗಳೂರಿನಲ್ಲಿರುವ ಸಂಘದ ಕಛೇರಿಯಲ್ಲಿ ಜರುಗಿತು.

ತಾ॥ 22-10-78 ರಂದು ಕಾರ್ಯಕಾರಿ ಸಮಿತಿ ಸಭೆಯ ನಂತರದ ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ ಸಂಘದ ಕಾರ್ಯದರ್ಶಿ ಕಾಂ. ಎ.ಕೆ. ವಿಶ್ವನಾಥರು ದೀರ್ಘವಾದ ವರದಿಯನ್ನು ಮಂಡಿಸಿದರು. ವರದಿಯ ಮೇಲಿನ ಚರ್ಚೆಯಲ್ಲಿ ಕಾಂ. ವಿ. ಸುಕುಮಾರ್, ಕಾಂ. ಪಾಲ್ ಮತ್ತು ಶ್ರೀಮತಿಯರಾದ ಕಮಲಮ್ಮ, ದೇವಮ್ಮ, ಈರಮ್ಮ ಮತ್ತು ನಾಗಮ್ಮ ಇವರುಗಳು ಭಾಗವಹಿಸಿದರು. ದೀರ್ಘಕಾಲದ ಚರ್ಚೆಯ ನಂತರ ಸಭೆಯು ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಿತು.

ಕೇಂದ್ರ ಸರಕಾರವು ಕಾರ್ಮಿಕ ವಿರೋಧಿ ಕೈಗಾರಿಕಾ ಸಂಬಂಧಗಳ ಮಸೂದೆಯನ್ನು ಇನ್ನೂ ಹಿಂತೆಗೆದುಕೊಳ್ಳದಿರುವುದರ ಬಗ್ಗೆ ಈ ಸಭೆಯು ಟೀಕಿಸಿ ಕೇಂದ್ರ ಸರಕಾರವು ಕೂಡಲೇ ಈ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸದೆ ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸುವ ನಿರ್ಣಯವನ್ನು ಈ ಸಭೆಯು ಅಂಗೀಕರಿಸಿತು.

ರಾಜ್ಯ ಸರಕಾರವು ಕೆಲವು ಸಂಸ್ಥೆಗಳನ್ನು ಅಗತ್ಯ ಸೇವಾ ಸಂಸ್ಥೆಗಳೆಂದು ಪರಿಗಣಿಸಿ ಅವುಗಳಲ್ಲಿ ಮುಷ್ಕರಗಳನ್ನು ನಿಷೇಧಿಸುವ ಮೂಲಕ ಕಾರ್ಮಿಕರ ಮೂಲಭೂತ ಹಕ್ಕನ್ನು ಕಸಿದುಕೊಳ್ಳಲು ಯತ್ನಿಸುವ ರಾಜ್ಯ ಸರಕಾರದ ಕಾರ್ಮಿಕ ವಿರೋಧಿ ಮಸೂದೆಯನ್ನು ವಿರೋಧಿಸಿ, ರಾಜ್ಯ ಸರಕಾರವು ಕೂಡಲೇ ಈ ಮಸೂದೆಯನ್ನು ಹಿಂತೆಗೆದುಕೊಳ್ಳಬೇಕೆಂದು ಈ ಸಭೆಯು ಒತ್ತಾಯಿಸಿತು.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಏಪ್ರಿಲ್ ಒಂದರಿಂದ ಬಸ್ ದರವನ್ನು ಹೆಚ್ಚಿಸುವುದನ್ನು ವಿರೋಧಿಸಿ ಚಳುವಳಿಯನ್ನು ನಡೆಸಬೇಕೆಂಬ ಕರೆಯನ್ನು ಸಂಘದ ಸದಸ್ಯರಿಗೆ ಈ ಸಭೆಯು ಕೊಟ್ಟಿತು.

ಕೇಂದ್ರ ಮತ್ತು ರಾಜ್ಯ ಸರಕಾರಗಳು ತಮ್ಮ ಮುಂಗಡ ಪತ್ರದಲ್ಲಿ ನಿತ್ಯೋಪಯೋಗಿ ವಸ್ತುಗಳಾದ ಸೀಮೆಎಣ್ಣೆ, ಬೆಂಕಿಪೊಟ್ಟಣ, ಸಾಬೂನು, ಬೀಡಿ,

[7ನೇ ಪುಟ ನೋಡಿ]

ರಾಜ್ಯ ರೈತ ಸಮ್ಮೇಳನ ಸ್ವಾಗತ ಸಮಿತಿ ರಚನೆ

ಮುಂಬರುವ ಮೇ ತಿಂಗಳಿನಲ್ಲಿ ರಾಜ್ಯ ರೈತಸಮ್ಮೇಳನವು ಮಂಗಳೂರಿನಲ್ಲಿ ಜರುಗಲಿದ್ದು ಅದರ ಯಶಸ್ಸಿಗೆ ಸ್ಥಳೀಯ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ ಎಂದು ದಕ್ಷಿಣ ಕನ್ನಡ ಜಿಲ್ಲಾ ರೈತಸಂಘದ ಪತ್ರಿಕಾ ಪ್ರಕಟಣೆ ತಿಳಿಸಿದೆ.

ದ. ಕನ್ನಡ ಜಿಲ್ಲಾ ರೈತಸಂಘದ ವಿಸ್ತೃತ ಸಭೆಯು ಮಂಗಳೂರಿನಲ್ಲಿ ಇತ್ತೀಚೆಗೆ ಸೇರಿದ್ದು ಸಭೆಯ ಅಧ್ಯಕ್ಷತೆಯನ್ನು ಶ್ರೀ ಕೆ. ವಿ. ರಾವ್ ವಹಿಸಿದ್ದರು. ರಾಜ್ಯ ರೈತಸಮ್ಮೇಳನವನ್ನು ಮಂಗಳೂರಿನಲ್ಲಿ ಮೇ ಮಧ್ಯಭಾಗದಲ್ಲಿ ನಡೆಸಬೇಕೆಂದು ಪ್ರಾಂತ ರೈತಸಂಘ ಮಾಡಿದ ತೀರ್ಮಾನವನ್ನು ಕಾರ್ಯದರ್ಶಿ ಶ್ರೀ ಪಿ. ರಾಮಚಂದ್ರರಾವ್ ಅವರು ಸಭೆಗೆ ತಿಳಿಸಿದರು.

ರಾಜ್ಯ ರೈತಸಮ್ಮೇಳನದ ಯಶಸ್ಸಿಗೆ 155 ಸದಸ್ಯರನ್ನೊಳಗೊಂಡ ಸ್ಥಳೀಯ ಸ್ವಾಗತ ಸಮಿತಿಯನ್ನು ರಚಿಸಲಾಗಿದ್ದು ಶ್ರೀ ಅಬ್ರಹಂ ಕರ್ಕಡ ಅವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಕೆ. ವಿ. ರಾವ್ ಅವರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ಯು. ಜನಾರ್ಧನ ನಾಯಕ್ ಅವರನ್ನು ಕಾರ್ಯದರ್ಶಿಯನ್ನಾಗಿಯೂ, ಶ್ರೀ ಪಿ. ರಾಮಚಂದ್ರ ರಾವ್ ಮತ್ತು ಶ್ರೀ ಡೇವಿಡ್ ಎ. ಕರ್ಕಡ ಅವರನ್ನು ಜಂಟಿ ಕಾರ್ಯದರ್ಶಿಗಳನ್ನಾಗಿ ಹಾಗೂ ಶ್ರೀ ಕೆ. ಆರ್. ಶ್ರಿಯಾನ್ ಅವರನ್ನು ಕೋಶಾಧಿಕಾರಿಯನ್ನಾಗಿ ಆಯ್ಕೆ ಮಾಡಲಾಯಿತು.

ಕೊಡಗು ಜಿಲ್ಲೆಯ ತಿತಿಮತಿಯಲ್ಲಿ ರೈತರನ್ನು ಒಕ್ಕಲೆಬ್ಬಿಸುತ್ತಿರುವ ಸರ್ಕಾರದ ಕ್ರಮವನ್ನು ಸಭೆಯು ಖಂಡಿಸಿ ತಮ್ಮ ನ್ಯಾಯಬದ್ಧ ಹಕ್ಕಿಗಾಗಿ ಹೋರಾಡುತ್ತಿರುವ ರೈತರಿಗೆ ಸಭೆಯು ತನ್ನ ಬೆಂಬಲವ್ಯಕ್ತಪಡಿಸಿದೆ. ಒಕ್ಕಲೆಬ್ಬಿಸುತ್ತಿರುವ ಅಲ್ಲಿನ ಜನತೆ ನಡೆಸುತ್ತಿರುವ ಹೋರಾಟಕ್ಕೆ ಜಿಲ್ಲೆಯ ಜನತೆಯು ಬೆಂಬಲಕೊಡಬೇಕೆಂದು ಸಭೆಯು ಪ್ರಾರ್ಥಿಸಿದೆ. ●

ಕರ್ನಾಟಕ ಪ್ಲಾಂಟೇಷನ್ ಕೆಲಸಗಾರರ ಸಂಘದ ಸಭೆ

ಕರ್ನಾಟಕ ಪ್ರಾವಿನ್ಷಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ನಿನ ಕಾರ್ಯಕಾರಿ ಸಮಿತಿಯ ವಿಸ್ತೃತ ಸಭೆಯು 27.2.79 ರಂದು ಚಿಕ್ಕಮಗಳೂರಿನಲ್ಲಿರುವ ಸಂಘದ ಕಛೇರಿಯಲ್ಲಿ ನಡೆಯಿತು.

ಕಾಂ. ಸಿ. ನಂಜುಂಡಪ್ಪನವರು ಸಂಘದ ಚಟುವಟಿಕೆಗಳ ಬಗ್ಗೆ ಕೊಟ್ಟ ವರದಿಯನ್ನು ಸಭೆಯು ಚರ್ಚಿಸಿ ಅಂಗೀಕರಿಸಿತು.

ಕೇಂದ್ರ ಸರ್ಕಾರದ ಕೈಗಾರಿಕಾ ಸಂಬಂಧಗಳ ಮಸೂದೆ ಮತ್ತು ರಾಜ್ಯ ಸರ್ಕಾರದ ಅಗತ್ಯಸೇವೆಗಳಲ್ಲಿ ಮುಷ್ಕರ ನಿಷೇಧಿಸುವ ಮಸೂದೆಗಳನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸುವ ನಿರ್ಣಯವನ್ನು ಸಭೆ ಅಂಗೀಕರಿಸಿತು.

ಕೆ. ಎಸ್. ಆರ್. ಟಿ. ಸಿ. ಬಸ್ ದರದ ಏರಿಕೆಯನ್ನು ವಿರೋಧಿಸಿ ಏಪ್ರಿಲ್ 1, 2, 3 ರಂದು ಚಳುವಳಿ ನಡೆಸಲು ಸಭೆ ತೀರ್ಮಾನಿಸಿತು.

ರಾಜ್ಯ ಸರಕಾರಿ ನೌಕರರ ಬೇಡಿಕೆಗಳನ್ನು ಬೆಂಬಲಿಸಿ ಅವರ ಸತ್ಯಾಗ್ರಹಕ್ಕೆ ಬೆಂಬಲಕೊಡುವ ನಿರ್ಣಯವನ್ನು, ಹಾಸನದ ಪ್ಲಾಂಟರ್ಸ್ ಕಾಫಿ ಕ್ಯೂರಿಂಗ್ ಸಂಸ್ಥೆಯ ಕಾರ್ಮಿಕರ ಮುಷ್ಕರಕ್ಕೆ ಬೆಂಬಲ ನೀಡುವ ನಿರ್ಣಯವನ್ನು ಅಂಗೀಕರಿಸಲಾಯಿತು. ಕೇಂದ್ರ ಸರ್ಕಾರದ ಮುಂಗಡಪತ್ರವನ್ನು ವಿರೋಧಿಸಿ ಚಳುವಳಿ ನಡೆಸುವ ತೀರ್ಮಾನವನ್ನು ಸಭೆ ಕೈಗೊಂಡಿತು.

ಆಕ್ಟ್ರಾಯ್ ರದ್ದಿನಿಂದ ನೌಕರಿ ಕಳೆದುಕೊಳ್ಳುವವರಿಗೆ ಬದಲಿ ನೌಕರಿ ಕೊಡಬೇಕೆಂದು ಸಭೆ ರಾಜ್ಯಸರ್ಕಾರವನ್ನು ಒತ್ತಾಯಪಡಿಸಿತು. ಕೊಡಗಿನ ತಿತಿಮತಿ, ಪುತ್ತಿಗೋಡು, ಪಲ್ಲಿಪಟ್ಣಗಳ ರೈತರ ಚಳುವಳಿಗೆ ಬೆಂಬಲ ಕೊಡುವ ನಿರ್ಣಯವನ್ನು ಸಭೆ ಅಂಗೀಕರಿಸಿತು. ನಂತರ ಮದರಾಸಿನಲ್ಲಿ ನಡೆಯುವ ಸಿ.ಐ.ಟಿ.ಯು. ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಚುನಾಯಿಸಲಾಯಿತು. ●

ಕುಂದಾಪುರದಲ್ಲಿ ಕೇಂದ್ರ ಮತ್ತು ರಾಜ್ಯಸರ್ಕಾರಗಳ ಮುಂಗಡಪತ್ರಗಳ ವಿರುದ್ಧ ಪ್ರತಿಭಟನಾ ಸಭೆ

ಜೀವನಾವಶ್ಯಕ ವಸ್ತುಗಳ ಮೇಲಿನ ಎಲ್ಲಾ ತೆರಿಗೆಗಳನ್ನು ಹಿಂತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸಲು ದ. ಕ. ಜಿಲ್ಲೆಯಾದ್ಯಂತ 26-3-79 ರಂದು ಪ್ರತಿಭಟನಾದಿನವನ್ನಾಗಿ ಆಚರಿಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ದ. ಕ. ಜಿಲ್ಲಾಸಮಿತಿಯು ಕರೆ ನೀಡಿತ್ತು. ಇದನ್ನು ಅನುಸರಿಸಿ ಕುಂದಾಪುರದಲ್ಲಿ ಆ ದಿನ ಕಾರ್ಮಿಕರ ಬೃಹತ್ ಮೆರವಣಿಗೆ ಮತ್ತು ಸಂಜೆ ಆರುಗಂಟೆಗೆ ಕುಂದಾಪುರ ಗಾಂಧಿ ಮೈದಾನದಲ್ಲಿ ಸಾರ್ವಜನಿಕ ಸಭೆ ಜರುಗಿತು.

ಕೇಂದ್ರ ಮತ್ತು ರಾಜ್ಯ ಸರಕಾರದ ಮುಂಗಡಪತ್ರಗಳು ಜನಸಾಮಾನ್ಯರ ಜೀವನವನ್ನು ಅತ್ಯಂತ ಕಷ್ಟಕ್ಕೆ ಗುರಿಪಡಿಸಿದೆ, ಅಗಾಧ ಕೊರತೆ ಹಣವನ್ನು ನಿರ್ಮಿಸುವ ಮೂಲಕ ಇನ್ನಷ್ಟು ಹಣದುಬ್ಬರಕ್ಕೆ ಎಡೆ ಮಾಡಿದೆ ಎಂದು ಕುಂದಾಪುರ ತಾಲ್ಲೂಕು ಸಮಿತಿ ಸದಸ್ಯರಾದ ಕಾಂ. ಕೆ. ಶಂಕರ ಅವರು ಮಾತನಾಡಿದರು.

ನಂತರ ಕುಂದಾಪುರ ತಾಲ್ಲೂಕು ಸಮಿತಿಯ ಕಾರ್ಯದರ್ಶಿಯವರಾದ ಕಾಂ. ಅಬ್ರಹಾಂ ಕರ್ಕಡ ಅವರೂ ಮುಂಗಡಪತ್ರವನ್ನು ಕುರಿತು ಮಾತನಾಡಿದರು. ●

ಕಂಕನಾಡಿಯಲ್ಲಿ ನಾಗರೀಕರ ಸಭೆ

ದ.ಕ. ಜಿಲ್ಲೆ ಮಂಗಳೂರು ತಾಲ್ಲೂಕಿನ ಕಂಕನಾಡಿಯ 'ಬಿ' ಪಂಚಾಯಿತಿಯ ನಾಗರೀಕರ ವಿಸ್ತೃತ ಸಭೆಯು 25-3-79ರಂದು ಜರುಗಿತು. ಗ್ರಾಮದ ಕುಂದುಕೊರತೆ, ಅಭಿವೃದ್ಧಿ ಕಾರ್ಯಕ್ರಮಗಳನ್ನು ಚರ್ಚಿಸಿ ಕಾರ್ಯಕ್ರಮ ರೂಪಿಸಲಾಯಿತು. —

ಮಾರ್ಕ್ಸಿಸ್ಟ್ ಸ್ಟಡಿ ಸರ್ಕಲ್ ಆಶ್ರಯದಲ್ಲಿ ಮೆರವಣಿಗೆ, ಸಭೆ

ಮಾರ್ಚ್ 28ರಂದು ಬೆಂಗಳೂರಿನ ಮಾರ್ಕ್ಸಿಸ್ಟ್ ಸ್ಟಡಿ ಸರ್ಕಲ್ ಆಶ್ರಯದಲ್ಲಿ ಹೋಟೆಲ್ ಕಾರ್ಮಿಕರ ಸಭೆ ದೇವಾಂಗಹಾಲ್‌ನಲ್ಲಿ ಸೇರಿತ್ತು. ಅತಿಯಾದ ಶೋಷಣೆಗೊಳಗಾಗಿರುವ ಹಾಗೂ ಅಸಂಘಟಿತಕಾರ್ಮಿಕರಾದ ಹೋಟೆಲ್ ಕಾರ್ಮಿಕರು ಸಭೆಗೆ ಮೊದಲು ರಾತ್ರಿ 9 ಗಂಟೆಗೆ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಿಂದ ಹೊರಟು ಮೆಜೆಸ್ಟಿಕ್ ಮೂಲಕ ದೇವಾಂಗಸಂಘದ ಸಭಾಂಗಣಕ್ಕೆ ಮೆರವಣಿಗೆಯಲ್ಲಿ ಬಂದರು. ಐನೂರಕ್ಕೂ ಹೆಚ್ಚು ಕಾರ್ಮಿಕರು ಭಾಗವಹಿಸಿದ್ದ ಮೆರವಣಿಗೆಯಲ್ಲಿ ಕೆಂಬಾವುಟಗಳು ಹಾಗೂ ಕ್ರಾಂತಿಕಾರಿ ಘೋಷಣೆಗಳು ಎಲ್ಲರ ಗಮನ ಸೆಳೆದವು.

ರಾತ್ರಿ 10-30ಕ್ಕೆ ಪ್ರಾರಂಭವಾದ ಸಭೆಯಲ್ಲಿ ಸಿ. ಐ. ಟಿ. ಯು. ಕಾರ್ಯದರ್ಶಿ ಕಾಂ. ವಿ. ಜೆ. ಕೆ. ನಾಯರ್, ಕಾಂ. ಅನಂತರಾಮ್, ಕಾಂ. ಇಕ್ಬಾಲ್ ಹುಸೇನ್, ಕಾಂ. ನಂಬಿಯಾರ್ ಹಾಗೂ ಎ. ಐ. ಟಿ. ಯು. ಸಿ. ಮುಖಂಡ ಬಾಬು ಮ್ಯಾಥೂಸ್ ಮತ್ತು ಕರ್ನಾಟಕ ಹೋಟೆಲ್ ಕಾರ್ಮಿಕರ ಸಂಘದ ಅಧ್ಯಕ್ಷ ಶ್ರೀಪತಿಯವರು ಭಾಗವಹಿಸಿ, ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಅನೇಕ ಹೋಟೆಲ್ ಕಾರ್ಮಿಕರು ಸಹ ಮಾತನಾಡಿ ತಮ್ಮ ಅನುಭವ ಮತ್ತು ಸಂಘಟನೆಯ ಅಗತ್ಯವನ್ನು ತಿಳಿಸಿದರು.

ಕೊನೆಯಲ್ಲಿ ಮಾತನಾಡಿದ ಕಾಂ. ವಿ. ಜೆ. ಕೆ. ನಾಯರ್‌ರವರು, ಹೋಟೆಲ್ ಕಾರ್ಮಿಕರನ್ನು ಸ್ವಾರ್ಥಿ ಮಾಲೀಕರು ಮಾತ್ರವಲ್ಲದೆ, ಮಾರವಾಡಿಗಳು, ಭ್ರಷ್ಟ ಪೋಲೀಸರು, ಲೇಬರ್ ಇಲಾಖೆಯ ಅಧಿಕಾರಿಗಳು ಹಾಗೂ ಗೂಂಡಾಗಳು ಅಮಾನವೀಯತೆಯಿಂದ ನಡೆಸಿಕೊಳ್ಳುತ್ತಿದ್ದಾರೆ. ಆದ್ದರಿಂದ ಮನುಷ್ಯರಾದ ಹೋಟೆಲ್ ಕಾರ್ಮಿಕರು, ಮನುಷ್ಯರಂತೆ ಬದುಕಲು, ಕೆಲಸ ಮಾಡಲು ಹಾಗೂ ವಿಶ್ರಾಂತಿ ಪಡೆಯಲು 1979ರ ಮೇ 1ನೇ ತಾರೀಖನ್ನು ಬೇಡಿಕೆಯ ದಿನವನ್ನಾಗಿ ಆಚರಿಸಲು ಕರೆಯಿತ್ತರು.

ಸಭೆ ಸರ್ವಾನುಮತದಿಂದ, ಮೇ ದಿನವನ್ನು "ಎಂಟುಗಂಟೆ ಕೆಲಸ ನಮ್ಮ ಮೂಲಭೂತ ಹಕ್ಕು" ಎಂಬುದಾಗಿ ಬೇಡಿಕೆ ದಿನವನ್ನಾಗಿ ಆಚರಿಸಲು ತೀರ್ಮಾನಿಸಿತು. ಕಾಂ. ನಾರಾಯಣರವರು ಪ್ರಾರಂಭದಲ್ಲಿ ಎಲ್ಲರನ್ನೂ ಸ್ವಾಗತಿಸಿ, ಕೊನೆಯಲ್ಲಿ ವಂದಿಸಿದರು. ▭

ಆರ್ಥಿಕ ಸಮೀಕ್ಷೆ:

ಕೇಂದ್ರದ ಮುಂಗಡ ಪತ್ರ

—ಆರ್. ಚಂದ್ರ

ಚೌಧುರಿ ಚರಣಸಿಂಗರು ಕಳೆದ ಫೆಬ್ರವರಿ 28ರಂದು ಪಾರ್ಲಿಮೆಂಟಿನಲ್ಲಿ ಮಂಡಿಸಿದ 1979-80ರ ಮುಂಗಡ ಪತ್ರದಲ್ಲಿ ತನ್ನ ಪಟ್ಟಭದ್ರ ಹಿತೈಷಿಗಳಾದ ಶ್ರೀಮಂತ ರೈತರಿಗೂ ದೊಡ್ಡ ಭೂಮಾಲಕರಿಗೂ ಸುಮಾರು 200 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿನ ತೆರಿಗೆ ರಿಯಾಯಿತಿಯನ್ನು ನೀಡಿರುವರು. ಬಂಡವಾಳಶಾಹಿಗಳ ಸಂಪತ್ತು ಮತ್ತು ಆದಾಯಗಳ ಮೇಲೆ ಯಾವ ಗಣನೀಯವಾದ ತೆರಿಗೆಯನ್ನು ಹೆಚ್ಚಿಸಲಿಲ್ಲ. ಗ್ರಾಮೀಣ ಹಾಗೂ ಪೇಟೆಪಟ್ಟಣಗಳಲ್ಲಿನ ಬಡಜನರ ಹಾಗೂ ಮಧ್ಯಮವರ್ಗದವರ ಮೇಲೆ ಸುಮಾರು ರೂ 665 ಕೋಟಿಯಷ್ಟು ಹೊಸಕರಭಾರ ಹೇರಿರುವರು. ಭಾರತದ ಜನಕೋಟಿಯ ಮೇಲೆ ರೂ 1355 ಕೋಟಿಯಷ್ಟು ಕೊರತೆ ಹಣಸೃಷ್ಟಿಯ ಪ್ರವಾಹ ಹರಿಯಬಿಡುವ ಪ್ರಸ್ತಾಪ ಮಾಡಿ, ದೇಶದ ಆರ್ಥಿಕ ರಂಗದಲ್ಲಿ ಇನ್ನಷ್ಟು ಗೊಂದಲವನ್ನು ಉಂಟುಮಾಡಿದ್ದಾರೆ. ನಿರ್ಭೀತಿಯಿಂದ ಪಟ್ಟಭದ್ರರಿಗೆ ನೀಡಿದ ತೆರಿಗೆ ರಿಯಾಯಿತಿಯಲ್ಲಿ, 'ನಿರ್ದಾಕ್ಷಿಣ್ಯದಿಂದ ಜನಸಾಮಾನ್ಯರ ಮೇಲೆ ಹೇರಿದ ಕರಭಾರದಲ್ಲಿ ಮತ್ತು ಭಾರೀ ಪ್ರಮಾಣದ ಕೊರತೆ ಹಣಸೃಷ್ಟಿಯ ಪ್ರಸ್ತಾಪದಲ್ಲಿ, ಚರಣಸಿಂಗರ 1979-80ರ ಮುಂಗಡಪತ್ರ ಒಂದು ದೊಡ್ಡ ದಾಖಲೆ! ಚೌಧುರಿ ಸಾಹೇಬರು, ಗ್ರಾಮೀಣ ನಗರವಾಸಿಗಳೊಳಗಿನ ಕಾಲ್ಪನಿಕ ವೈರುಧ್ಯವನ್ನು ಎತ್ತಿಹಿಡಿದು, ತಾನು ಗ್ರಾಮೀಣ ಜನತೆಯ ಪಕ್ಷಪಾತಿ ಎಂದು ಪ್ರತಿಪಾದಿಸುತ್ತಾ, ದೇಶದಲ್ಲಿ ಬಡವ-ಶ್ರೀಮಂತ ವರ್ಗಗಳೊಳಗಿರುವ ಮೂಲಭೂತವಾದ ವೈರುಧ್ಯವನ್ನು ಮುಚ್ಚಿಡುವ ಹೊಸ ಪ್ರಯತ್ನವನ್ನು ಈ ಮುಂಗಡ ಪತ್ರದಲ್ಲಿ ನಡೆಸಿದ್ದಾರೆ!

ಅಸಮಾನತೆ ಮತ್ತು ತೆರಿಗೆ ರಿಯಾಯಿತಿಗಳು

ಜನರ ಆದಾಯಗಳಲ್ಲಿ ಅಸಮಾನತೆಯನ್ನು ಹೋಗಲಾಡಿಸುವುದು, ಉತ್ಪಾದನಾಶಕ್ತಿಯನ್ನು ಹೆಚ್ಚಿಸುವುದು, ಸುಖಭೋಗದ ಅನವಶ್ಯಕ ವಸ್ತುಗಳ ಉತ್ಪಾದನೆ ಹಾಗೂ ಬಳಕೆಯನ್ನು ತಡೆಗಟ್ಟುವುದು ಮತ್ತು ನಿರುದ್ಯೋಗ ಅರೆ ಉದ್ಯೋಗ ಸಮಸ್ಯೆಗಳನ್ನು ನಿವಾರಿಸುವುದು ತೆರಿಗೆಯ ಧೋರಣೆಗಳೆಂದು ಮುಂಗಡಪತ್ರದಲ್ಲಿ ಘೋಷಿಸಲಾಗಿದೆ. ಆದರೆ, ಮುಂಗಡಪತ್ರದ ಒಂದೊಂದೇ ಪ್ರಸ್ತಾಪವನ್ನು ಪರಿಶೀಲಿಸಿದರೆ, 1978-79ರ ಆರ್ಥಿಕಪರಿಸ್ಥಿತಿಯನ್ನು ವಿಶ್ಲೇಷಿಸಿದರೆ, ಮುಂಗಡಪತ್ರದಲ್ಲಿ ಘೋಷಿಸಲಾದ ಯಾವ ಉದ್ದೇಶಗಳೂ ಈಡೇರಲಾರವು ಎಂದು ಸ್ಪಷ್ಟವಾಗುವುದು.

ಕಚ್ಚಾ ಹೊಗೆಸೊಪ್ಪಿನ ಮೇಲೆ ಅಬಕಾರಿ ತೆರಿಗೆಯನ್ನು ಸಂಪೂರ್ಣವಾಗಿ ತೆಗೆದುಹಾಕಲಾಗಿ ಬೆಳೆಗಾರರಿಗೆ ರೂ. 121 ಕೋಟಿಯಷ್ಟು ಕರಭಾರ ಕಡಿಮೆ ಆಗಲಿ ಎಂದು ಉದ್ದೇಶಿಸಲಾಗಿದೆ. ಆದರೆ, ಈ ರಿಯಾಯಿತಿಯ ಲಾಭ 70,000 ಬೆಳೆಗಾರರಿಗಾಗಲೀ, ಈ ವ್ಯವಸಾಯದಲ್ಲಿ ದುಡಿಯುವ 2 ಲಕ್ಷ ಕೃಷಿಕೂಲಿಗಾರರಿಗಾಗಲೀ ದೊರಕದೆ, ಹೊಗೆಸೊಪ್ಪು ದಾಸ್ತಾನು ಲೈಸನ್ಸ್ ದಾರರಿಗೇ ದಕ್ಕುವುದೆಂದು ಸಂಶಯ ಪಡಲಾಗಿದೆ. ಕಚ್ಚಾ ಹೊಗೆಸೊಪ್ಪಿನ ಮೇಲ್ ಅಬಕಾರಿ ತೆರಿಗೆಯನ್ನು ಸಧ್ಯ ಕೊಡುತ್ತಿರುವುದು ಈ ದಾಸ್ತಾನುದಾರರೇ ಆಗಿರುವುದರಿಂದ, ಅವರೇ ತೆರಿಗೆ ರಿಯಾಯಿತಿಯ ಲಾಭ ಪಡೆಯಬಹುದೆಂದು ಭಯಪಡಲಾಗಿದೆ. ಬೆಳೆಗಾರರ ಬೆಳೆಯನ್ನು ಸಕಾಲಕ್ಕೆ ಖರೀದಿ ಮಾಡುವವರಿಲ್ಲ, ಅವರಿಗೆ ಸಾಲ ಸವಲತ್ತುಗಳೂ ಸರಿಯಾಗಿ ಸಿಗುತ್ತಿಲ್ಲ, ಕೃಷಿ ಕೂಲಿಗಾರರಿಗೆ ಕನಿಷ್ಟ ವೇತನವೂ ಸಿಗುತ್ತಿಲ್ಲ. ಸಣ್ಣ ಬೆಳೆಗಾರರು ತುಂಬ ಕಷ್ಟನಷ್ಟಗಳಿಗೆ ಒಳಗಾಗಿದ್ದಾರೆ. ವಿಮರ್ಶಿಸಿ ನೋಡಿದರೆ, ಈ ತೆರಿಗೆ ರಿಯಾಯಿತಿಯು ಚೌಧುರಿ ಸಾಹೇಬರು ದಕ್ಷಿಣದ ಆಂಧ್ರ ಮೊದಲಾದ ರಾಜ್ಯಗಳಲ್ಲಿ ತನ್ನ ಪಟ್ಟಭದ್ರ ಹಿತೈಷಿಗಳಾದ ಶ್ರೀಮಂತ ರೈತರ ಮತ್ತು ದೊಡ್ಡ ಭೂಮಾಲೀಕರ ಬೆಂಬಲಗಳಿಸುವ ಮೊದಲ ಹೆಜ್ಜೆ. ಕರ್ನಾಟಕದ ಮುಖ್ಯಮಂತ್ರಿ ಶ್ರೀ ದೇವರಾಜ್ ಅರಸರು ಚರಣಸಿಂಗರ ಮುಂಗಡ ಪತ್ರವನ್ನು ಸ್ವಾಗತಿಸಿದುದು ಈ ದೃಷ್ಟಿಯಿಂದ ಅರ್ಥಪೂರ್ಣವಾಗಿದೆ!

ಹಗುರ ಡೀಸೆಲ್ ಎಣ್ಣೆಯ ತೆರಿಗೆ ರಿಯಾಯತಿಯನ್ನು ವಿಶ್ಲೇಷಿಸಿದರೆ, ಇದು ಮುಖ್ಯವಾಗಿ ಗುಜರಾತ್ ಮತ್ತು ಉತ್ತರ ಪ್ರದೇಶದ ಶ್ರೀಮಂತ ರೈತರಿಗೇ ಸಹಾಯ ಮಾಡುವ ಉದ್ದೇಶವಾಗಿದೆ. ದೇಶದಲ್ಲಿ ಹಗುರ ಡಿಸೇಲ್ ಎಣ್ಣೆ ಬಳಕೆಯಲ್ಲಿ ಶೇಕಡಾ 40ರಷ್ಟು ಮಾತ್ರ ಕೃಷಿಕ್ಷೇತ್ರದಲ್ಲಿ ಆಗುತ್ತಿದೆ. ಈ ಎಣ್ಣೆ ಬಳಸುವ ಪಂಪುಸೆಟ್ಟುಗಳು ಅತ್ಯಂತ ವಿರಳ. ಗುಜರಾತಿನಲ್ಲಿ ಇಂತಹ 6,34,927 ಪಂಪುಗಳಿದ್ದರೆ, ಉ. ಪ್ರದೇಶದಲ್ಲಿ 1,68,324 ಪಂಪುಗಳಿವೆ. ಅಸ್ಸಾಂ, ಹಿಮಾಚಲಪ್ರದೇಶ, ಕರ್ನಾಟಕ, ಬಿಹಾರ, ಕಾಶ್ಮೀರ ರಾಜ್ಯಗಳಲ್ಲಿ ಈ ಪಂಪುಗಳ ಬಳಕೆಯೇ ಇಲ್ಲ. ಇತರ ರಾಜ್ಯಗಳಲ್ಲಿ ಒಟ್ಟು 2,00,000 ಪಂಪುಗಳಿಗಿಂತ ಹೆಚ್ಚು ಬಳಕೆ ಇಲ್ಲ. (ಇಂಡಿಯನ್ ಆಯಿಲ್ ಕಾರ್ಪೋರೇಷನಿಗೆ ನ್ಯಾಶನಲ್ ಕೌನ್ಸಿಲ್ ಆಫ್ ಅಪ್ಲೈಡ್ ರಿಸರ್ಚ್ ಸಂಸ್ಥೆಯು ನಡೆಸಿದ ಅಧ್ಯಯನದ ಆಧಾರ, 1980-81 ರಲ್ಲಿ ಈ ಪಂಪುಗಳ ಅಂದಾಜು ಬಳಕೆಯ ಎಣಿಕೆ) ಇದರಿಂದ ಒಂದು ವಿಷಯ ತಿಳಿದುಬರುವುದೇನೆಂದರೆ, ಪ್ರಧಾನಿ ಮುರಾರ್ಜಿ ದೇಸಾಯಿ ಮತ್ತು ಉಪಪ್ರಧಾನಿ ಚರಣಸಿಂಗ್ ರಾಜಕೀಯದಲ್ಲಿ ಪ್ರತಿಸ್ಪರ್ಧಿಗಳಾಗಿದ್ದರೂ, ಗುಜರಾತಿನ ಮತ್ತು ಉ. ಪ್ರದೇಶದ ತಮ್ಮ ತಮ್ಮ 'ಕುಲಕ್' ಬಾಂಧವರನ್ನು ಸಂತುಷ್ಟಿಗೊಳಿಸುವುದರಲ್ಲಿ, ಆರ್ಥಿಕ ಧೋರಣೆಯಲ್ಲಿ ಸಂಪೂರ್ಣ ಸಹಮತ ಹೊಂದಿರುವರು! ಸಂಸತ್ತು ಮತ್ತು ಸಾರ್ವಜನಿಕ ಅಭಿಪ್ರಾಯಗಳ ಒತ್ತಡದಿಂದ ಈ ತೆರಿಗೆ ರಿಯಾಯತಿಯನ್ನು ಸಧ್ಯ ಕೈಬಿಡಲಾಗಿದ್ದರೂ, ಇಂತಹ ಸ್ವಜನ ಪಕ್ಷಪಾತಿ ತೆರಿಗೆ ಧೋರಣೆಯ ಅಪಾಯ ಯಾವಾಗಲೂ ಇರುವುದು.

ಮುಂಗಡ ಪತ್ರದಲ್ಲಿ ರಾಸಾಯನಿಕ ಗೊಬ್ಬರ, ಪವರ್‌ಟಿಲ್ಲರ್, ಪಂಪ್, ಇತ್ಯಾದಿ ಕೃಷಿ ಉತ್ಪಾದನೆಗೆ ಅಗತ್ಯವಾದವುಗಳ ಮೇಲಿನ ಅಬಕಾರಿ ತೆರಿಗೆ ಹಾಗೂ ಆಮದು ತೆರಿಗೆಯನ್ನು ಶೇಕಡಾ 50ರಷ್ಟು ಕಡಿಮೆಮಾಡಿ ರೂ. 107 ಕೋಟಿಯಷ್ಟು ತೆರಿಗೆ ರಿಯಾಯಿತಿ ನೀಡಲಾಗಿದೆ. ಇದರ ಪ್ರಯೋಜನ ಹೆಚ್ಚಾಗಿ ಶ್ರೀಮಂತ ರೈತರಿಗೂ ದೊಡ್ಡ ಭೂಮಾಲೀಕರಿಗೂ ದೊರಕುವುದಲ್ಲವೆ? ಒಟ್ಟು 78 ಮಿಲಿಯ ಗಾಮೀಣ ಕುಟುಂಬಗಳಲ್ಲಿ 50 ಎಕರೆಗಳಿಗಿಂತಲೂ ಹೆಚ್ಚು ಭೂ ಹಿಡುವಳಿ ಇರುವ ಕುಟುಂಬಗಳು ಕೇವಲ 3,02,000 (ಶೇ. 0.39), 20ರಿಂದ 50 ಎಕರೆಗಳ ಒಳಗಿರುವ ಭೂ ಹಿಡುವಳಿದಾರರ ಕುಟುಂಬಗಳು 2,254,000 (ಶೇ. 2.89) ಮತ್ತು 10ರಿಂದ 20 ಎಕರೆ ಒಳಗಿರುವ ಭೂ ಹಿಡುವಳಿದಾರರ ಕುಟುಂಬಗಳು 5,053,000 (ಶೇ. 6.49). ಅಂದರೆ ಶೇ. 10ಕ್ಕಿಂತಲೂ ಕಡಿಮೆ ಗ್ರಾಮೀಣ ಕುಟುಂಬಗ್ಗಳು 10 ಎಕರೆಗಳಿಗಿಂತಲೂ ಹೆಚ್ಚು ಭೂ ಹಿಡುವಳಿದಾರರಾಗಿದ್ದು, ಉಳಿದ ಶೇ. 90ಕ್ಕಿಂತಲೂ ಹೆಚ್ಚು ಗ್ರಾಮೀಣ ಕುಟುಂಬಗಳು 10 ಎಕರೆಗಳಿಗಿಂತಲೂ ಕಡಿಮೆ ಭೂಹಿಡುವಳಿದಾರರಾಗಿರುವರು. ಅವರಲ್ಲಿ ಶೇ. 10 ರಷ್ಟು ಗ್ರಾಮೀಣ ಕುಟುಂಬಗಳು ಭೂಹೀನರಾದರೆ, ಶೇ. 35ರಷ್ಟು ಗ್ರಾಮೀಣ ಕುಟುಂಬಗಳು ಒಂದು ಎಕರೆಗಿಂತಲೂ ಕಡಿಮೆ ಭೂ ಹಿಡುವಳಿದಾರರು ಮತ್ತು ಶೇ.34ರಷ್ಟು ಗ್ರಾಮೀಣ ಕುಟುಂಬಗಳು 1ರಿಂದ 5 ಎಕರೆಗಳೊಳಗಿನ ಭೂ ಹಿಡುವಳಿದಾರರು. (ಆಧಾರ: 1971-72ರಲ್ಲಿ ರಿಸರ್ವ್ ಬ್ಯಾಂಕ್ ನಡೆಸಿದ ಅಧ್ಯಯನ) ಶೇಕಡಾ 90ರಷ್ಟು ಗ್ರಾಮೀಣ ಕುಟುಂಬಗಳಲ್ಲಿರುವ 35ಕೋಟಿ ಭೂಹೀನರ, ಕೃಷಿ ಕೂಲಿಗಾರರ, ಬಡರೈತರ ಮತ್ತು ಸಣ್ಣ ಕೈ ಕಸಬುದಾರರ ಉತ್ಪಾದನಾ ಶಕ್ತಿ ಮತ್ತು ಗ್ರಾಹಕಶಕ್ತಿಯನ್ನು ಮತ್ತು ಅವರ ಉದ್ಯೋಗಾವಕಾಶವನ್ನು ಹೆಚ್ಚಿಸುವ ಯಾವ ಪ್ರಸ್ತಾಪವನ್ನೂ 'ರೈತರ ಬಂಧು' ಎಂದು ಹೊಗಳಿಸಿಕೊಳ್ಳುವ ಚರಣಸಿಂಗರ ಮುಂಗಡ ಪತ್ರದಲ್ಲಿ ಮಾಡಲಿಲ್ಲವೆಂಬುದನ್ನು ಮರೆಯಬಾರದು. ರಾಸಾಯನಿಕ ಗೊಬ್ಬರಗಳ, ಪಂಪುಸೆಟ್ಟುಗಳ, ನಿರಾವರಿಯ, ಸಹಕಾರಿ ಹಾಗೂ ವಾಣಿಜ್ಯ ಬ್ಯಾಂಕುಗಳ ಸಾಲ ಸಲಹೆಗಳ ಸೌಲಭ್ಯಗಳಾವುವೂ ಈಬಡಜನರಿಗೆ ಸಿಗುತ್ತಿಲ್ಲ. ಶೇಕಡಾ 75ರಷ್ಟು ಸಾಲ ಸೌಕರ್ಯಗಳು ಪಟ್ಟಭದ್ರ 'ಕುಲಕ್'ರಿಗೇ ಸಿಗುತ್ತಿದೆ. ಮುಂಗಡಪತ್ರದಲ್ಲಿ ಪುನಃ ಅವರಿಗೇ ತೆರಿಗೆ ವಿನಾಯ್ತಿ, ಸುಲಭ ದರದಲ್ಲಿ ಸಾಲ, ನೀರಾವರಿ, ವಿದ್ಯುತ್ ಇತ್ಯಾದಿಗಳ ಪೂರೈಕೆ, ಅಭಿವೃದ್ಧಿ ತೆರಿಗೆಯಲ್ಲಿ ಕಡಿತ.

ಈಗಾಗಲೇ ಈ ಶ್ರೀಮಂತ ರೈತರಿಗೆ ಮತ್ತು ದೊಡ್ಡ ಭೂಮಾಲೀಕರಿಗೆ ರಾಸಾಯನಿಕ ಗೊಬ್ಬರ ಸರಬರಾಜಿಗೆ ಮತ್ತು ಅವರ ಉತ್ಪಾದನೆಯ ಖರೀದಿಗೆ ಹಾಗೂ ರಫ್ತು ವ್ಯಾಪಾರಕ್ಕೆ ರೂ. 1000 ಕೋಟಿಗಿಂತಲೂ ಹೆಚ್ಚು ಸಹಾಯಧನ (subsidy) ವನ್ನು ಕೇಂದ್ರಸರಕಾರ ನೀಡುತ್ತಿದೆ. ರಾಜ್ಯ ಸರಕಾರಗಳು ಒದಗಿಸುವ ಸಹಾಯ ಧನವೂ ಸಾಲಸೌಲಭ್ಯಗಳೂ ಈ 'ಕುಲಕ್' ವರ್ಗಕ್ಕೆ ಹೆಚ್ಚಾಗಿ ಸಿಗುತ್ತಿದೆ. ಇಷ್ಟಾದರೂ, ಈ ಗ್ರಾಮೀಣ ಶ್ರೀಮಂತವರ್ಗ ಆದಾಯತೆರಿಗೆ ಹಾಗೂ ಸಂಪತ್ತು ತೆರಿಗೆಗಳಿಂದ ಸಂಪೂರ್ಣ ಮುಕ್ತವಾಗಿದೆ. ಹೆಚ್ಚಿನ ರಾಜ್ಯಗಳಲ್ಲಿ ಕೃಷಿ ಆದಾಯದ ಮೇಲೆ ತೆರಿಗೆ ವಸೂಲಿ ಮಾಡುವ ಶಾಸನಗಳೇ ಇಲ್ಲ. ಅಂತಹ ಶಾಸನಗಳಿರುವ ರಾಜ್ಯಗಲ್ಲಿಯೂ, ಕೃಷಿ ಆದಾಯ ತೆರಿಗೆಯ ಸಂಗ್ರಹವು ಅತ್ಯಲ್ಪವಾಗಿದ್ದು, ಇತ್ತೀಚೆಗೆ ಬಿಹಾರ್ ರಾಜ್ಯದಲ್ಲಿ ಅಂತಹ ಒಂದು ಶಾಸನವನ್ನೇ ರದ್ದು ಮಾಡಲಾಯಿತು. ದೇಶಾದ್ಯಂತ ಕೇವಲ 69,000 ಗ್ರಾಮೀಣ ಶ್ರೀಮಂತ ಕುಟುಂಬಗಳನ್ನು ಸಂಪತ್ತು ತೆರಿಗೆಗೆ ಒಳಪಡಿಸಲಾಗಿದೆ. ಆದರೆ, ಮೊದಲೇ ತಿಳಿಸಿದಂತೆ, 50 ಎಕರೆಗಳಿಗಿಂತಲೂ ಹೆಚ್ಚು ಭೂಹಿಡುವಳಿ ಇರುವ ಕುಟುಂಬಗಳ ಸಂಖ್ಯೆ 3 ಲಕ್ಷವಿದ್ದರೂ, 20 ರಿಂದ 50 ಎಕರೆಗಳೊಳಗಿನ ಭೂಹಿಡುವಳಿ ಇರುವ ಕುಟುಂಬಗಳ ಸಂಖ್ಯೆ 22.5 ಲಕ್ಷವಿದ್ದರೂ, ಇವರಲ್ಲಿ ಬಹುಪಾಲು ಕುಟುಂಬಗಳು ಯಾವ ಕರಭಾರವನ್ನೂ ವಹಿಸಬೇಕಾಗಿಲ್ಲ. ಕೆ. ಎನ್. ರಾಜ್, ಭೂತಲಿಂಗಂ ಮುಂತಾದವರ ತಜ್ಞ ಸಮಿತಿಗಳು ಕೃಷಿ ಆದಾಯ ಮತ್ತು ಸಂಪತ್ತುಗಳ ಮೇಲೆ ಗಣನೀಯವಾಗಿ ತೆರಿಗೆ ಹೇರಿ ಆರ್ಥಿಕ ಅಭಿವೃದ್ಧಿಯನ್ನು ಹೆಚ್ಚಿಸಲು ಸಂಪನ್ಮೂಲ ಸಂಗ್ರಹಿಸಬೇಕೆಂಬ ಸಲಹೆಗಳನ್ನು, 1979-80ರ ಮುಂಗಡಪತ್ರದಲ್ಲಿಯೂ ಕೈಬಿಡಲಾಗಿದೆ.

ಭೂಹಿಡುವಳಿಯ ಕೇಂದ್ರೀಕರಣವನ್ನು ಹೋಗಲಾಡಿಸುವ ಭೂಸುಧಾರಣೆಯ ಮಸೂದೆಗಳು ಪರಿಣಾಮಕಾರಿಯಾಗಿ ಕಾರ್ಯಗತವಾಗದೆ ಉಳಿದಿವೆ. ಯೋಜನಾ ಆಯೋಗದ ಅಂದಾಜಿನಂತೆ ಮರುವಿತರಣೆಗೆ ಸಿಗಬಹುದಾದ ಹೆಚ್ಚುವರಿ ಭೂಮಿ ಇನ್ನೂ 86ಲಕ್ಷ ಎಕರೆಗಳಿದ್ದರೂ, ಸರಕಾರದ ಅಂದಾಜಿನಂತೆ 69 ಲಕ್ಷ ಎಕರೆಗಳಿವೆ. ಜುಲೈ 1977ರಷ್ಟರಲ್ಲಿ ರಾಜ್ಯಸರಕಾರಗಳು ಕೇವಲ 20ಲಕ್ಷ ಎಕರೆ ಹೆಚ್ಚುವರಿ ಭೂಮಿಯನ್ನು ವಶಪಡಿಸಿಕೊಂಡು 12.9 ಲಕ್ಷ ಎಕರೆಗಳಷ್ಟು ಭೂಮಿಯನ್ನು ಮರುವಿತರಣೆ ಮಾಡಿವೆ. ನಂತರದ ಒಂದು ವರುಷಗಳಲ್ಲಿ ಕೇವಲ 3,31 ಲಕ್ಷ ಎಕರೆ ಭೂಮಿ ವಶಪಡಿಸಿಕೊಂಡು 2.86 ಲಕ್ಷ ಎಕರೆ ಭೂಮಿ ಮರು ವಿತರಣೆ ಮಾಡಲಾಗಿದೆ. 1978ರ ಅಂತ್ಯದೊಳಗೆ ಸರಕಾರದ ಅಂದಾಜಿನಂತಿರುವ ಹೆಚ್ಚುವರಿ ಭೂಮಿಯನ್ನು ಮರುವಿತರಣೆ ಮಾಡಿ ಮುಗಿಸಬೇಕೆಂದು ಉದ್ದೇಶಿಸಲಾಗಿದ್ದರೂ, ಈಗ ಈ ಕಾರ್ಯಕ್ರಮವನ್ನು 1983ರ ಒಳಗೆ ಮುಗಿಸಬೇಕೆಂದು ನಿರ್ದೇಶಿಸಲಾಗಿದೆ. ಮೂರು ದಶಮಾನಗಳಿಂದಲೂ ಮುಗಿಯದ ಭೂಸುಧಾರಣೆ ಇನ್ನು ಮುಂದೆಯಾದರೂ ನೆರವೇರೀತು ಎಂಬ ಭರವಸೆ ಇಲ್ಲ. ಹೀಗಾಗಿ, ಗ್ರಾಮೀಣ ಪ್ರದೇಶಗಳಲ್ಲಿ ಭೂಹಿಡುವಳಿ ಮತ್ತು ಸಂಪತ್ತುಗಳ ಕೇಂದ್ರೀಕರಣ, ಶ್ರೀಮಂತ ಭೂಹಿಡುವಳಿದಾರರಿಗೇ ಅಪ್ರತ್ಯಕ್ಷ ತೆರಿಗೆ ರಿಯಾಯಿತಿ, ಸುಲಭ ದರಗಳಲ್ಲಿ ಕೃಷಿ ಉತ್ಪನ್ನಕ್ಕೆ ಅಗತ್ಯ ವಸ್ತುಗಳ ಸಾಲ ಸಲಹೆ ಸಹಾಯಗಳ ಪೂರೈಕೆ, ಸಹಾಯಧನ ನೀಡಿಕೆ ಮತ್ತು ಆದಾಯ ಹಾಗೂ ಸಂಪತ್ತು ತೆರಿಗೆಗಳಿಂದ ವಿನಾಯಿತಿ, ಇತ್ಯಾದಿಗಳಿಂದ ಗ್ರಾಮೀಣ ಜನರೊಳಗಿನ ಅಸಮಾನತೆಯು ಹೆಚ್ಚುತ್ತಿದೆ. ಬಡತನ ಮತ್ತು ನಿರುದ್ಯೋಗ ಹೆಚ್ಚುತ್ತಿದೆ. ಬಡ ಹಾಗೂ ಮಧ್ಯಮ ವರ್ಗದ ರೈತರಿಗೆ ತಮ್ಮ ಫಸಲಿಗೆ ಸಕಾಲದಲ್ಲಿ ಯೋಗ್ಯ ಬೆಲೆ ಸಿಗದಾಗಿದೆ. ಗ್ರಾಮೀಣ ಜನಕೋಟಿಯ ಗ್ರಾಹಕ ಶಕ್ತಿಯು, ಗ್ರಾಮೀಣ ಮಾರುಕಟ್ಟೆಯು ಕ್ಷಯಿಸುತ್ತಿದೆ. ಜನತಾ ಸರಕಾರದ ಆರ್ಥಿಕ ಧೋರಣೆಯಾಗಲೀ, 1979-80ರ ಮುಂಗಡ ಪತ್ರದಲ್ಲಿನ ತೆರಿಗೆ ಧೋರಣೆಯಾಗಲೀ ಇಂತಹ ದಾರುಣ ಪರಿಸ್ಥಿತಿಯನ್ನು ಹೋಗಲಾಡಿಸಲು ಯಾವ ಪ್ರಸ್ತಾಪವನ್ನು ಮಾಡಲಿಲ್ಲ.

ಕರಹೇರಿಕೆ ಮತ್ತು ಬೆಲೆ ಏರಿಕೆ

1979-80ರ ಮುಂಗಡ ಪತ್ರದಲ್ಲಿ ಸೂಚಿಸಲಾದ ರೂ. 665 ಕೋಟಿ ಹೊಸ ಕರಭಾರವು ಹಿಂದಿನ ಎಲ್ಲಾ ವರುಷಗಳಿಗಿಂತಲೂ ಅತ್ಯಧಿಕವಾಗಿದ್ದು, ಅದರಲ್ಲಿ ಶೇ. 90 ರಷ್ಟು ಜೀವನಾವಶ್ಯಕ ವಸ್ತುಗಳಾದ ಪೆಟ್ರೋಲಿಯಂ, ಸೀಮೆ ಎಣ್ಣೆ, ಅಡಿಗೆ ಅನಿಲ, ಸಾಬೂನು, ಬೆಂಕಿಪೆಟ್ಟಿಗೆ, ಬೀಡಿ, ವಿದ್ಯುತ್ ಉಪಕರಣ, ಕಾಫಿ, ಬಿಸ್ಕತ್, ಟೂತ್‌ಪೇಸ್ಟ್ ಮತ್ತು ಬ್ರೆಶ್, ಪೋಸ್ಟ್ ಕವರ್, ಟೆಲಿಫೋನು ಮತ್ತು ಟೆಲಿಗ್ರಾಂ ಸೇವೆ, ವಿವಿಧಮೋಟಾರು ವಾಹನ ಮುಂತಾದವುಗಳ ಮೇಲಿನ ಭಾರೀ ಪ್ರಮಾಣದ ಅಪ್ರತ್ಯಕ್ಷ ತೆರಿಗೆಯಾಗಿದೆ. ಇಷ್ಟಲ್ಲದೆ, ರೈಲ್ವೆ ಮುಂಗಡ ಪತ್ರದಲ್ಲಿ ನಗರಗಳೊಳಗೆ ಸಂಚರಿಸುವ ರೈಲ್ವೆ ದರಗಳನ್ನೂ ಗಣನೀಯವಾಗಿ ಹೆಚ್ಚಿಸಲಾಗಿದೆ. ಹೊಸ ಕರಭಾರ ಹೇರಿದ ಹೆಚ್ಚಿನ ವಸ್ತುಗಳು ಗ್ರಾಮೀಣ

[6ನೇ ಪುಟ ನೋಡಿ]

ಮಾರ್ಕ್ಸ್‌ವಾದ - ಲೆನಿನ್‌ವಾದದಿಂದ ದೂರ ಸರಿದಿದ್ದರ ಪರಿಣಾಮ

—ಎಂ. ಬಸವಪುನ್ನಯ್ಯ

ಎರಡು ಮೂರು ವರ್ಷಗಳಿಂದಲೂ ಚೀನಾ ಮತ್ತು ವಿಯೆಟ್ನಾಂಗಳ ನಡುವೆ ಆರಂಭವಾದ ಕಲಹಗಳು, ಸಂಘರ್ಷಗಳು ಕೊನೆಗೆ ಶಿಖರವನ್ನು ಮುಟ್ಟಿ, 1979ರ ಫೆಬ್ರವರಿ 17 ರಂದು ಚೀನಾದ ಸೈನ್ಯಗಳು ವಿಯೆಟ್ನಾಮಿನ ಪ್ರದೇಶವನ್ನು ಆಕ್ರಮಿಸಿದಾಗ ಎರಡು ಸಮಾಜವಾದಿ ದೇಶಗಳ ನಡುವೆ ಮಾಮೂಲಿ ಯುದ್ಧವೇ ಆರಂಭವಾಯಿತು. ಆಕ್ರಮಣಶೀಲ ಚೀನಾ ಪಡೆಗಳು, ವಿಯೆಟ್ನಾಮಿನ ತಾಯ್ನಾಡಿನಲ್ಲಿ 20 ರಿಂದ 30 ಕಿಲೋಮೀಟರುಗಳ ಒಳಗೂ ನುಗ್ಗಿ, ಅನೇಕ ಪಟ್ಟಣಗಳು ಮತ್ತು ನಗರಗಳನ್ನು ವಶಪಡಿಸಿಕೊಂಡಿವೆ.

ಮಾರ್ಚಿ 4 ರ ವೇಳೆಗೆ ತನ್ನ ಸೈನ್ಯಗಳನ್ನು ವಾಪಸ್ಸು ಕರೆಸಿಕೊಳ್ಳುವುದಾಗಿ ಚೀನೀ ಸರಕಾರವು ಪ್ರಕಟಿಸಿ, ಅದರಂತೆ ವಾಪಸ್ಸು ಕರೆಸಿಕೊಳ್ಳಲು ಆರಂಭಿಸಿದ್ದರೂ ಕೂಡ, ಈವರೆಗೂ ಸಂಪೂರ್ಣವಾಗಿ ವಾಪಸ್ಸು ಕರೆಸಿಕೊಂಡೂ ಇಲ್ಲ, ಯುದ್ಧವು ಮುಗಿದೂ ಇಲ್ಲ. ವಿಯೆಟ್ನಾಂ ದೇಶವನ್ನು ತಾವು ಆಕ್ರಮಿಸಿದ್ದು ಅದಕ್ಕೆ ಶಿಕ್ಷೆ ವಿಧಿಸಲೆಂದೂ, ಅದಕ್ಕೆ ಪಾಠ ಕಲಿಸಲೆಂದೂ, ಅವರು "ಸರಿಯಾಗಿ ನಡೆದುಕೊಳ್ಳ"ದಿದ್ದರೆ ತಾವು ಮತ್ತೆ ಎರಗುವುದಾಗಿಯೂ ಚೀನಾ ದೇಶ ಕಲಹಪರ ಪ್ರಕಟಣೆಗಳನ್ನು ಇತ್ತಿದೆ. ಈ ಪ್ರಕಟಣೆಗಳು ಜಗತ್ತಿನ ಅನೇಕ ದೇಶಗಳ ಜನತೆಯಲ್ಲಿ ಅಸಮಾಧಾನವನ್ನೂ, ಜುಗುಪ್ಸೆಯನ್ನೂ ಹುಟ್ಟಿಸುತ್ತಿವೆ. ಕಳೆದ ಮುವ್ವತ್ತು ದಿನಗಳಿಂದ ನಡೆಯುತ್ತಿರುವ ಈ ದುರಂತ ಯುದ್ಧವು ವಿಯೆಟ್ನಾಂ ಜನತೆಗೆ ಅಪಾರ ಹಾನಿಯನ್ನು ಉಂಟುಮಾಡಿದೆ. ಅಲ್ಲದೆ, ವಿಶ್ವ ಸಮತಾವಾದಕ್ಕೂ ಅದರ ಐಕ್ಯತೆಗೂ ಅಗಾಧ ಪೆಟ್ಟನ್ನು ಕೊಟ್ಟಿದೆ.

ಈ ಆಕ್ರಮಣದ ಬಗ್ಗೆ ಜಗತ್ತಿನ ಜನತೆ ಸ್ಪಷ್ಟ ಮಾತುಗಳಲ್ಲಿ ವಿರೋಧವನ್ನು ವ್ಯಕ್ತಪಡಿಸಿದ್ದರೂ ಕೂಡ, ಚೀನದ ಸಮತಾವಾದಿ ಸರ್ಕಾರ ಅದರ ಬಗ್ಗೆ ಏನೂ ಆಲೋಚಿಸದಿರುವುದು ಆಶ್ಚರ್ಯಕರವಾಗಿದೆ. ವಿಯೆಟ್ನಾಂ ದೇಶದ ಮೇಲೆ ತಾವು ನಡೆಸುತ್ತಿರುವ ಆಕ್ರಮಣ ಶಿಕ್ಷಾರೂಪದ್ದೇ ಹೊರತು, ಅದರ ಪ್ರದೇಶಗಳನ್ನು ವಶಪಡಿಸಿಕೊಳ್ಳುವ ಇಚ್ಛೆ ತಮಗೆ ಇಲ್ಲ. ವಿಯೆಟ್ನಾಂ ದೇಶವು ಕಂಪೂಚಿಯದ ಪಾಲ್‌ಪಾಟ್ ಆಳ್ವಿಕೆಯನ್ನು ಕಿತ್ತೊಗೆಯಲು ಸಹಾಯ ಮಾಡಿದೆ, ಅದು ತನ್ನ ನೆಲದಿಂದ ಅನೇಕ ಚೀನಿಯರನ್ನು ಹೊರಗಟ್ಟುತ್ತಿದೆ, ಆಗ್ನೇಯ ಏಷ್ಯಾದಲ್ಲಿ ಅದು ಸೋವಿಯತ್ "ಅಧಿಪತ್ಯಶಾಹಿ" ಗಳ ಸೇವಕನ ಹಾಗೆ ಕೆಲಸಮಾಡುತ್ತಿದೆ, ಚೀನದ ಗಡಿಸೈನ್ಯದೊಡನೆ ವಿಯೆಟ್ನಾಂ ಪದೇ ಪದೇ ಕಲಹಗಳನ್ನು ಆರಂಭಿಸುತ್ತಿದೆ ಎಂದು ಚೀನವು ವಾಕರಿಕೆ ಬರುವಷ್ಟು ಹೇಳಿಕೆಗಳನ್ನು ಕೊಟ್ಟರೂ ಅವೆಲ್ಲವೂ ಯಾವುದೇ ಬುದ್ಧಿ ಸಮನಿರುವ ಮನುಷ್ಯನನ್ನು ಸಮಾಧಾನಗೊಳಿಸಲಾರವು. ವಿಯೆಟ್ನಾಂ ಜೊತೆ ಮಾಡುತ್ತಿರುವ ಯುದ್ಧವನ್ನು ಇಡ್ಯಾವುದರಿಂದಲೂ ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ.

ಚೀನದ ಕಮ್ಯುನಿಸ್ಟ್ ನಾಯಕರು ನೀಡುತ್ತಿರುವ ಅಸಮರ್ಥನೀಯ ಹೇಳಿಕೆಗಳು ಮತ್ತು ಯಾವ ಕಾರಣಗಳನ್ನು ಅದರ ಸಮರ್ಥನೆಗೆ ಕೊಟ್ಟಿದ್ದರೂ, ವಿಯೆಟ್ನಾಂ ಮೇಲೆ ಅವರು ಆರಂಭಿಸಿರುವ ಯುದ್ಧ, ಇವೆಲ್ಲವೂ ಅವರ ದೊಡ್ಡ ದೇಶದ ದುರಹಂಕಾರ ಭಾವನೆಯನ್ನು ಪ್ರದರ್ಶಿಸುತ್ತವೆ. ಅಲ್ಲದೆ, ಇವೆಲ್ಲವೂ ಚೀನದ ಕಮ್ಯುನಿಸ್ಟ್ ನಾಯಕರು ನಂಬುತ್ತೇವೆಂದು ಹೇಳುವ ಮಾರ್ಕ್ಸ್‌ವಾದ - ಲೆನಿನ್‌ವಾದದಿಂದ ಮತ್ತು ಕಾರ್ಮಿಕ ಅಂತರರಾಷ್ಟ್ರೀಯತೆಯಿಂದ ತುಂಬ ದೂರ ಹೋಗಿರುವ ಸಂಗತಿಗಳು.

ಜಗತ್ತಿನ ವಿವಿಧ ಕಮ್ಯುನಿಸ್ಟ್ ಪಕ್ಷಗಳ ನಡುವೆ ಇರುವ ರಾಜಕೀಯ, ಸೈದ್ಧಾಂತಿಕ, ತಾತ್ವಿಕ ಮತ್ತು ಕಾರ್ಯತಂತ್ರದ ವ್ಯತ್ಯಾಸಗಳು ಈಗ ಮಾಮೂಲಿ ಯುದ್ಧಗಳ ಹಂತವನ್ನು ತಲುಪಿರುವುದು ಸ್ಪಷ್ಟವಾಗಿದೆ. ಇದು ಅಪಾಯಕಾರಿ ಸೂಚನೆಯೂ ಆಗಿದೆ. ಈಗ ಕಿತ್ತೊಗೆಯಲ್ಪಟ್ಟ ಪಾಲ್‌ಪಾಟ್ ಆಳ್ವಿಕೆಗೂ ವಿಯೆಟ್ನಾಮೀಯರಿಗೂ ಇದ್ದ ಗಡಿ ಕಲಹ, 1969 ರಲ್ಲಿ ರಷ್ಯಕ್ಕೂ ಚೀನಕ್ಕೂ ನಡೆದ ಗಡಿಕಲಹ ಮತ್ತು ಈಗ ಚೀನವು ವಿಯೆಟ್ನಾಮಿನ ಮೇಲೆ ನಡೆಸಿದ ಆಕ್ರಮಣ ಇವೆಲ್ಲವೂ, ಸಮಾಜವಾದಿ ದೇಶಗಳು ತಮ್ಮ ಭಿನ್ನಾಭಿಪ್ರಾಯಗಳನ್ನು ಮಾರ್ಕ್ಸ್‌ವಾದ-ಲೆನಿನ್‌ವಾದದ ಮತ್ತು ಕಾರ್ಮಿಕ ಅಂತರರಾಷ್ಟ್ರೀಯತೆಯ ದಾರಿಯ ಮುಖಾಂತರ ಪರಿಹರಿಸಿಕೊಳ್ಳುವುದು ಸಾಧ್ಯವಾಗದಿದ್ದರೆ ಎರಡು ದೇಶಗಳಿಗೂ ಇರುವ ಅಪಾಯಕಾರಿ ಸಮರ ಸಾಮರ್ಥ್ಯಗಳನ್ನು ಎತ್ತಿತೋರಿಸುತ್ತವೆ. ಈಗ ತೀವ್ರವಾಗಿ ಹಾನಿಗೊಂಡ ವಿಶ್ವ ಕಮ್ಯುನಿಸ್ಟ್ ಐಕ್ಯತೆಯ ಮುಖ್ಯ ಕರ್ತವ್ಯಗಳ ಬಗ್ಗೆ ಪ್ರತಿಯೊಬ್ಬ ಮಾರ್ಕ್ಸ್‌ವಾದಿ-ಲೆನಿನ್‌ವಾದಿಯೂ ಗಮನ ಹರಿಸಬೇಕಾಗಿದೆ.

"ಕಾರ್ಮಿಕರ ಚಳುವಳಿಯು ಬೆಳವಣಿಗೆಯ ವಿವಿಧ ಘಟ್ಟಗಳನ್ನು ಅಗತ್ಯವಾಗಿ ಹಾದು ಬರುತ್ತದೆ; ಪ್ರತಿ ಘಟ್ಟದಲ್ಲೂ ಕೆಲವು ಜನರು ಅಲ್ಲೇ ನಿಂತು ಬಿಡುತ್ತಾರೆ, ಮುಂದಿನ ಪ್ರಗತಿಯಲ್ಲಿ ಸೇರಿಕೊಳ್ಳುವುದಿಲ್ಲ; ರೋಮನ್ ಸಾಮ್ರಾಜ್ಯದ ಕ್ರೈಸ್ತ ಗುಂಪುಗಳು ಅತಿ ಕೆಟ್ಟ ಕಿರುಕುಳಗಳ ನಡುವೆ ಮಾಡಿದ ಹಾಗೆ, ವಿವಿಧ ಗುಂಪುಗಳು ಪರಸ್ಪರ ಬದ್ಧದ್ವೇಷಗಳನ್ನು ಸಾಧಿಸುತ್ತಿದ್ದರೂ ಕೂಡ, ಎಲ್ಲ ಗುಂಪುಗಳೂ "ಕಾರ್ಮಿಕ ಐಕ್ಯತೆ"ಯನ್ನು ಕಂಡುಕೊಳ್ಳುತ್ತವೆ ಎಂಬುದನ್ನು ಇದು ವಿವರಿಸುತ್ತದೆ" ಎಂದು 1873ರಲ್ಲಿ ಎಂಗೆಲ್ಸನು ಎ. ಬೆಬೆಲ್‌ನಿಗೆ ಬರೆದ ಪತ್ರದಲ್ಲಿರುವ ಹಾಗೆ ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿ ಮತ್ತು ಅದರ ಐಕ್ಯತೆಯ ಸಮಸ್ಯೆಗಳು ಈಗ ಪ್ರಾರಂಭದ ಹಂತದಲ್ಲೇನೂ ಇಲ್ಲ.

ಎಂಗೆಲ್ಸ್ ಈ ಮಾತುಗಳನ್ನು ಹೇಳಿ ನೂರೈವತ್ತು ವರ್ಷಗಳಾದ ನಂತರದಲ್ಲಿ ವಿಶ್ವಸಮತಾವಾದಿ ಚಳುವಳಿಯು ಅಗಾಧವಾಗಿ ಬೆಳೆದು, ದೊಡ್ಡ ಗೆಲುವುಗಳನ್ನು ಸಾಧಿಸಿದೆ. ವಿಶ್ವದ ಜನಸಂಖ್ಯೆಯ ಮೂರನೇ ಒಂದು ಭಾಗವು ಬೂರ್ಜ್ವಾ-ಜಮೀನ್ದಾರಿ ವ್ಯವಸ್ಥೆಯನ್ನು ಕಿತ್ತೊಗೆಯುವುದರಲ್ಲಿ ಮತ್ತು ಸಮಾಜವಾದಿ ಸಮಾಜವನ್ನು ಕಟ್ಟುವುದರಲ್ಲಿ ಸಫಲವಾಗಿದೆ.

ವರ್ಗಶಕ್ತಿಗಳು ಈಗ ಹೇಗೆ ಒಗ್ಗೂಡುತ್ತಿವೆಯೆಂದರೆ, ಸಾಮ್ರಾಜ್ಯಶಾಹಿಯನ್ನು ವಿರೋಧಿಸುವ ಶಕ್ತಿಗಳು, ಶಾಂತಿ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಮಾಜವಾದದ ಶಕ್ತಿಗಳು ಈಗ ಅಂತರರಾಷ್ಟ್ರೀಯ ಸಾಮ್ರಾಜ್ಯಶಾಹಿಗಿಂತ ಮೇಲುಗೈ ಪಡೆದಿವೆ.

1917ರಿಂದ ಮೂರು ದಶಕಗಳ ಕಾಲ ವಿಶ್ವದ ಸಾಮ್ರಾಜ್ಯಶಾಹಿ ಶಕ್ತಿಗಳಿಂದ ಸುತ್ತುವರೆಯಲ್ಪಟ್ಟು ಒಬ್ಬಂಟಿಯಾಗಿ ನಿಂತಿದ್ದ ಸೋವಿಯತ್ ದೇಶ ಈಗ ಹಾಗೆ ಬೇರೆಯಾಗಿ ನಿಂತಿಲ್ಲ. ಈಗ ಅನೇಕ ಸಮಾಜವಾದಿ ದೇಶಗಳು ತಲೆಯೆತ್ತಿವೆ. ಅಲ್ಲದೆ ಅನೇಕಾನೇಕ ಹೊಸದಾಗಿ ವಿಮೋಚನೆ ಪಡೆದ ಅಲಿಪ್ತದೇಶಗಳೂ ತಲೆಎತ್ತಿವೆ.

ಈಗ ಸದ್ಯದಲ್ಲಿ ಆಳವಾದ ವ್ಯತ್ಯಾಸಗಳು, ಬೇಧಗಳು ಬಂದಿದ್ದರೂ ಕೂಡ ಅಂತರರಾಷ್ಟ್ರೀಯ ಸಮತಾವಾದಿ ಚಳುವಳಿಯು ಈಗ ವಿಶಾಲವಾಗಿ ಹರಡಿ ಬಲ ಮತ್ತು ಗಾತ್ರದಲ್ಲಿ ಅದು ತೀರ ಬೆಳೆದಿದೆ.

ದೊಡ್ಡದಾದ ಸೋವಿಯತ್ ಸಮಾಜವಾದಿ ದೇಶ ಮತ್ತಿತರ ಖಂಡಗಳ ಸಣ್ಣ ಮತ್ತು ಮಧ್ಯಮಗಾತ್ರದ ಸಮಾಜವಾದಿ ದೇಶಗಳು ಮಾತ್ರ ಇದ್ದಾಗಿನ ಪರಿಸ್ಥಿತಿಯು ರಷ್ಯಕ್ಕೆ ಹೋಲಿಸಿದರೆ ಆರ್ಥಿಕವಾಗಿ ಮತ್ತು ಕೈಗಾರಿಕೆಗಳಲ್ಲಿ ಹಿಂದುಳಿದಿದ್ದರೂ ಕೂಡ ಜನತಾ ಚೀನವು ಇನ್ನೊಂದು ದೊಡ್ಡ ಸಮಾಜವಾದಿ ದೇಶವಾಗಿ ಹುಟ್ಟಿಕೊಂಡಾಗ ಬದಲಾಯಿತು.

ಸಮಾಜವಾದಿ ವ್ಯವಸ್ಥೆಯು ಇನ್ನೂ ಕೂಡ ವೈಯಕ್ತಿಕ ರಾಷ್ಟ್ರೀಯ ಗಡಿಗಳನ್ನುಳ್ಳ ದೇಶಗಳಿಗೆ ಸೀಮಿತವಾಗಿದೆ. ಅವುಗಳಲ್ಲಿ ಆರ್ಥಿಕ, ಸಾಮಾಜಿಕ, ಮತ್ತು ಸಾಂಸ್ಕೃತಿಕ ಬೆಳವಣಿಗೆಯ ಘಟ್ಟಗಳಲ್ಲಿ ತುಂಬಾ ವ್ಯತ್ಯಾಸಗಳಿವೆ. ಮಾರ್ಕ್ಸ್, ಎಂಗೆಲ್ಸ್, ಲೆನಿನ್ ಮತ್ತಿತರ ಮಾರ್ಕ್ಸ್‌ವಾದಿ ಚಿಂತಕರು ಭವಿಷ್ಯನುಡಿದಿದ್ದ ವಿಶ್ವಸಮಾಜವಾದಿ ಕ್ರಾಂತಿಯು ಇನ್ನೂ ದೂರದಲ್ಲೇ ಇದೆ.

ವಿಶ್ವ ಬಂಡವಾಳವಾದವು ಈಗ ಮೇಲುಗೈ ಕಳೆದುಕೊಂಡು ಆಳವಾದ ಬಿಕ್ಕಟ್ಟಿನಲ್ಲಿ ಇದ್ದರೂ ಕೂಡ, ಒಂದು ಬಲವಾದ ಶಕ್ತಿಯಾಗೇ ನಿಂತಿದೆ. ವಿಶ್ವದ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶಗಳಲ್ಲಿ ಆಳ್ವಿಕೆ ನಡೆಸಿದೆ. ಈ ಅಭಿವೃದ್ಧಿ ಪಡೆದ ಬಂಡವಾಳಶಾಹಿ ದೇಶಗಳೇ ವಿಶ್ವಸಮಾಜವಾದಿ ಕ್ರಾಂತಿಯ ಕೋಟೆಗಳಾಗುತ್ತವೆ ಎಂದು ಮಾರ್ಕ್ಸ್, ಎಂಗೆಲ್ಸ್, ಲೆನಿನ್ ಮತ್ತು ಇತರರು ನಿರೀಕ್ಷಿಸಿದ್ದರು. ಆದರೆ, ಅವು ಇನ್ನೂ ವಿಶ್ವಬಂಡವಾಳಶಾಹಿಯ ಪರಿಧಿಯೊಳಗೇ ಇದ್ದು, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಹಿಂದುಳಿದಿದ್ದ ದೇಶಗಳಲ್ಲಿ ನಡೆಯುವ ಸಮಾಜವಾದಿ ಕ್ರಾಂತಿಗಳನ್ನು ಉಗ್ರವಾಗಿ ವಿರೋಧಿಸಿ ನಿಗ್ರಹಿಸುತ್ತಿವೆ.

ವಿಶ್ವ ಕಾರ್ಮಿಕ ಚಳುವಳಿಯು ಇನ್ನೂ ಪೂರ್ಣಗೊಳ್ಳದೆ ಇರುವುದರಿಂದ ಮತ್ತು ವಿವಿಧ ಸಮಾಜವಾದಿ ದೇಶಗಳ ಸಾಮಾಜಿಕ ಆರ್ಥಿಕ ಪರಿಸ್ಥಿತಿಗಳು ತುಂಬ ಅಸಮಾನವಾಗಿರುವುದರಿಂದ ಕೆಲವು ಕಲಹಗಳು, ವ್ಯತ್ಯಾಸಗಳು ಮತ್ತು ವಿರೋಧಾಭಾಸಗಳು ತಲೆದೋರಿವೆ. ಸೋವಿಯತ್‌ದೇಶವೊಂದೇ ಇದ್ದಾಗ, ಅದು ತನ್ನದೇ ರೀತಿಯ ಕಾರ್ಯತಂತ್ರ, ನೀತಿಯನ್ನು ರೂಪಿಸಿಕೊಂಡಿತ್ತು. ವಿದೇಶಿನೀತಿಯೂ ಅದರದೇ ವಿಶಿಷ್ಟವಾಗಿದ್ದ ಛಾಪು ಹೊಂದಿತ್ತು. ಈಗ ವಿವಿಧ ಸಮಾಜವಾದಿ ದೇಶಗಳು ತಮ್ಮದೇ ಆದ ಆಂತರಿಕ ಮತ್ತು ವಿದೇಶಿ ನೀತಿಗಳನ್ನು ರೂಪಿಸಿಕೊಂಡಿವೆ. ಇವೆಲ್ಲ ಒಂದೇ ಆಗಿರುವುದಿರಲಿ, ಅನೇಕ ವೇಳೆ ಒಂದರಿಂದೊಂದು ಭಿನ್ನವಾಗಿರುವ ಘಟ್ಟವೂ ಬಂದಿದೆ. ವಿಶ್ವವ ಒಂದೇ ಸಮಾಜವಾದಿ ಕೇಂದ್ರದಿಂದ ಸಮಾನವಾದ ವಿದೇಶಿ ನೀತಿಯನ್ನು ರೂಪಿಸಿ ಪಾಲಿಸುವ ಮತ್ತು ಸಮಾಜವಾದದ ಮುನ್ನಡೆಗಾಗಿ, ಬಂಡವಾಳಶಾಹಿ ದೇಶಗಳಲ್ಲಿರುವ ವಿರೋಧಾಭಾಸಗಳನ್ನು ಬಳಸಿಕೊಳ್ಳುವ ಕಾಲ ಬದಲಾಗಿದೆ. ಅಲ್ಲದೆ, ಸಮಾಜವಾದಿ ದೇಶಗಳ ಹಿತಾಸಕ್ತಿಗಳ ನಡುವೆ ಇರುವ ವ್ಯತ್ಯಾಸಗಳು ಮತ್ತು ಕಲಹಗಳನ್ನು ಉಪಯೋಗಿಸಿಕೊಂಡು ಆ ಮೂಲಕ, ವಿಶ್ವದ ಸಮಾಜವಾದಿ ಶಕ್ತಿಗಳು ತಮ್ಮ ಮೇಲ ನಡೆಸಬಹುದಾದ ದಾಳಿಯನ್ನು ತಪ್ಪಿಸಿಕೊಳ್ಳಲು ಬಂಡವಾಳಶಾಹಿ ದೇಶಗಳು ಆರಂಭಿಸಿವೆ.

ಈ ಮೇಲೆ ಹೇಳಿದ ಅಂಶಗಳ ಜೊತೆ ಮತ್ತೊಂದು ವಿಚಾರವೂ ಹುಟ್ಟಿಕೊಂಡಿದೆ. ಅದೇಂದರೆ, ಕಳೆದ ಇಪ್ಪತ್ತಕ್ಕೂ ಹೆಚ್ಚು ವರ್ಷಗಳಿಂದೀಚೆಗೆ ವಿಶ್ವಸಮತಾವಾದಿ ಚಳುವಳಿಯಲ್ಲಿ ಸೈದ್ಧಾಂತಿಕ, ತಾತ್ವಿಕ, ರಾಜಕೀಯ ಮತ್ತು ಕಾರ್ಯತಂತ್ರದ ವ್ಯತ್ಯಾಸಗಳ ಸರಣಿಯೇ ಹುಟ್ಟಿಕೊಂಡಿದೆ. ಹೊಸ ಸಮಾಜವಾದಿ ದೇಶಗಳು ಉದಯವಾದ ಹಾಗೇ, ಅಂತರರಾಷ್ಟ್ರೀಯ ಸಮತಾವಾದಿ ಚಳುವಳಿಯಲ್ಲಿ ಅಂತರಪಕ್ಷ ಹೋರಾಟಗಳು, ಪಕ್ಷದ ಆಂತರಿಕ ಹೋರಾಟಗಳು ಹೊಸ ಆಯಾಮವನ್ನೇ ಪಡೆದಿವೆ. ಆಳುತ್ತಿರುವ ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳು ಮತ್ತು ರಾಜಕೀಯ, ಕಾರ್ಯತಂತ್ರದ ಮತ್ತು ತಾತ್ವಿಕ ಪ್ರಶ್ನೆಗಳ ಬಗ್ಗೆ ಮಾತನಾಡುವ, ಆದರೆ ಆಳಿಕೆ ನಡೆಸದಿರುವ ಕಮ್ಯುನಿಸ್ಟ್ ಪಕ್ಷಗಳ ನಡುವೆ ಬೇಧವು ತಲೆದೋರಿರುವುದಲ್ಲದೆ, ವಿವಿಧ ಆಳುವ ಕಮ್ಯುನಿಸ್ಟ್ ಪಕ್ಷಗಳ ನಡುವೆಯೂ ಭಿನ್ನಾಭಿಪ್ರಾಯಗಳು ಬಂದಿವೆ. ಆಳುವ ಕಮ್ಯುನಿಸ್ಟ್ ಪಕ್ಷಗಳು, ತಮ್ಮ ರಾಜಕೀಯ ನೀತಿಗಳಿಗೆ ಹೆಚ್ಚು ಒತ್ತುಕೊಡಲು ಮತ್ತು ಅವುಗಳನ್ನು ಉಗ್ರವಾಗಿ ಪಾಲಿಸಲು, ತಮ್ಮ ರಾಜ್ಯ ಅಧಿಕಾರವನ್ನು ಮತ್ತು ಅದರ ಅಂಗಗಳನ್ನು ಬಳಸಿಕೊಳ್ಳುವ ಪ್ರವೃತ್ತಿಯನ್ನು ತೋರಿಸುತ್ತಿವೆ. ಈ ವಿವಾದವು ಒಂದು ಆಳುವ ಕಮ್ಯುನಿಸ್ಟ್ ಪಕ್ಷ ಮತ್ತು ಆಳ್ವಿಕೆ ನಡೆಸದಿರುವ ಪಕ್ಷಗಳ ನಡುವೆ ಇದ್ದರೆ, ಒಂದು ಗಂಭೀರ ಸ್ವರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಅಥವಾ ಸಿ.ಪಿ.ಎಸ್.ಯು. (ಕಮ್ಯುನಿಸ್ಟ್ ಪಾರ್ಟಿ ಆಫ್ ಸೋವಿಯತ್ ಯೂನಿಯನ್) ಮತ್ತು ಸಿ.ಪಿ.ಸಿ. (ಕಮ್ಯುನಿಸ್ಟ್ ಪಾರ್ಟಿ ಆಫ್ ಚೈನಾ) ಗಳ ನಡುವೆ, ವಿಯೆಟ್ನಾಮಿನ ಕಮ್ಯುನಿಸ್ಟ್ ಪಕ್ಷ ಮತ್ತು ಮೊದಲಿನ ಪಾಲ್‌ಪಾಟ್ ನೇತೃತ್ವದ ಕಂಪೂಚಿಯ ಪಕ್ಷಗಳ ನಡುವೆ, ಈಗ ಚೀನದ ಕಮ್ಯುನಿಸ್ಟ್ ಪಕ್ಷ ಮತ್ತು ವಿಯೆಟ್ನಾಮಿನ ಕಮ್ಯುನಿಸ್ಟ್ ಪಕ್ಷಗಳ ನಡುವೆ, ಹೀಗೆ ಎರಡು ಆಳುವ ಕಮ್ಯುನಿಸ್ಟ್ ಪಕ್ಷಗಳ ನಡುವೆ ಈ ವಿವಾದ ಇದ್ದರೆ ಅದು ಅಪಾಯಕಾರಿ ಸ್ವರೂಪದಲ್ಲಿ ಕಾಣಿಸಿಕೊಳ್ಳುತ್ತದೆ.

ಈಗ ಹೊಸದಾಗಿ ಉದಯಿಸುತ್ತಿರುವ ಸಮಾಜವಾದಿ ಜಗತ್ತು ಮತ್ತು ಬೆಳೆಯುತ್ತಿರುವ ವಿಶ್ವಸಮತಾವಾದಿ ಚಳುವಳಿಗಳು ಎದುರಿಸುತ್ತಿರುವ ಅತಿ ಸಂಕೀರ್ಣವಾದ ಸಮಸ್ಯೆಗಳು ಇಂಥವು. ಯಾವ ಸಿದ್ಧ ಸೂತ್ರಗಳು ಅಥವಾ ಪರಿಹಾರಗಳು ಇದಕ್ಕಿಲ್ಲ. ಅವನ್ನು ಈಗ ಹುಡುಕಬೇಕಾಗಿದೆ. ವಿಶ್ವದ ಕ್ರಾಂತಿಕಾರಿ ಕಾರ್ಮಿಕವರ್ಗದ ಚಳುವಳಿಯು ಈ ಚಾರಿತ್ರಿಕ ಹಂತವನ್ನು ವೀಕ್ಷಿಸಲು ಇಂದು ಮಾರ್ಕ್ಸ್, ಎಂಗೆಲ್ಸ್, ಲೆನಿನ್ ಬದುಕಿಲ್ಲ. ವಿಶ್ವದ ರಾಜಕೀಯ ರಂಗದಲ್ಲಿ, ಸಮತಾವಾದವನ್ನು ದ್ವೇಷಿಸುವವರು ಮತ್ತು ಮಾರ್ಕ್ಸ್‌ವಾದಿ ಸಿದ್ಧಾಂತದ ಬಗ್ಗೆ

(5ನೇ ಪುಟ ನೋಡಿ)

[4ನೇ ಪುಟದಿಂದ]

ಮಾರ್ಕ್ಸ್‌ವಾದ-ಲೆನಿನ್‌ವಾದದಿಂದ ದೂರ ಸರಿದಿದ್ದರ ಪರಿಣಾಮ

ಸಂದೇಹಿಸುವ ಅನೇಕರು ಈಗ, ಮಾರ್ಕ್ಸ್ ಎಂಗೆಲ್ಸ್ ಇದಕ್ಕೆ ಯಾವ ಸಿದ್ಧ ಪರಿಹಾರವನ್ನೂ ಬಿಟ್ಟುಹೋಗಿಲ್ಲ ಎಂದು ಅವರ ಬಗ್ಗೆ ಪರಿಹಾಸ್ಯ ಮಾಡುತ್ತಾರೆ. ಯಾವನಾದರೂ ಒಬ್ಬ ವಿಜ್ಞಾನಿ ಒಂದಲ್ಲ ಒಂದು ವಿಚಾರದ ಬಗ್ಗೆ ತಪ್ಪು ಮಾಡಿದ ಮಾತ್ರಕ್ಕೆ ವಿಜ್ಞಾನವು ವಿಜ್ಞಾನವಾಗಿ ಉಳಿಯದೆ ಹೋಗುವುದಿಲ್ಲ. ಹಾಗೆಯೇ ಒಬ್ಬೊಬ್ಬ ದೊಡ್ಡ ಮಾರ್ಕ್ಸ್‌ವಾದಿ ನಾಯಕ ಅಥವಾ ಆಳುವ ಕಮ್ಯುನಿಸ್ಟ್ ಪಕ್ಷವು ಕೆಲವು ತಪ್ಪುಗಳನ್ನು ಮಾಡಿದ ಮಾತ್ರಕ್ಕೆ ಮಾರ್ಕ್ಸ್‌ವಾದ ಲೆನಿನ್‌ವಾದವೆಂಬ ಸಮಾಜವಿಜ್ಞಾನ, ಅತ್ಯಾಧುನಿಕ ಮತ್ತು ಅತ್ಯಂತ ಪ್ರಬುದ್ಧವಾದ ಸಮಾಜವಿಜ್ಞಾನ ಎನ್ನಿಸಿಕೊಳ್ಳದೆ ಬಿಡುವುದಿಲ್ಲ ಎಂಬ ಪ್ರಾಥಮಿಕ ಸರಳಜ್ಞಾನ ಅಂಥವರಿಗೆ ಇರುವುದಿಲ್ಲ.

ಚರ್ಚೆಯಲ್ಲಿರುವ ವಿಚಾರಕ್ಕೆ ಮತ್ತೆ ಬರುವುದಾದರೆ ಜಗತ್ತಿನಲ್ಲಿ ಒಂದೇ ಒಂದು ಸಮಾಜವಾದಿ ದೇಶ ಮತ್ತು ಹಲವು ಕಮ್ಯುನಿಸ್ಟ್ ಪಕ್ಷಗಳಿದ್ದ ಕಾಲಕ್ಕಿಂತಲೂ, ಮಾರ್ಕ್ಸ್‌ವಾದ-ಲೆನಿನ್‌ವಾದ ರಕ್ಷಣೆಯ ಹೋರಾಟ, ಅಡ್ಡದಾರಿಗಳ ವಿರುದ್ಧ ಹೋರಾಟ, ಬಂಡವಾಳಶಾಹಿಯ ವಿರುದ್ಧ ವಿಶ್ವಸಮಾಜವಾದಿ ವ್ಯವಸ್ಥೆಯ ರಕ್ಷಣೆಗಾಗಿ ಹೋರಾಟ, ವಿಶ್ವಸಮಾಜವಾದಿ ಸಮೂಹದ ರಕ್ಷಣೆಗಾಗಿ ಹೋರಾಟ ಮತ್ತು ವಿಶ್ವಸಮತಾವಾದಿ ಐಕ್ಯತೆ ಮತ್ತು ಕಾರ್ಮಿಕ ಅಂತರರಾಷ್ಟ್ರೀಯತೆಗಾಗಿ ನಡೆಸುವ ಹೋರಾಟಗಳು ಇವೆಲ್ಲವೂ ಈಗ ನೂರು ಪಟ್ಟು ಹೆಚ್ಚು ಸಂಕೀರ್ಣವಾದವು ಎಂಬುದನ್ನು ವಿವಿಧ ಕಮ್ಯುನಿಸ್ಟ್ ಪ್ರದೇಶಗಳ ನಾಯಕರು ಅರಿತುಕೊಳ್ಳಬೇಕಾದ ಕಾಲ ಬಂದಿದೆ. "ಕೆಟ್ಟ ಕಿರುಕುಳ ನಡುವೆಯೂ ರೋಮ್ ಸಾಮ್ರಾಜ್ಯದ ವಿವಿಧ ಕ್ರೈಸ್ತ ಗುಂಪುಗಳು ಒಂದರೊಡನೊಂದು ಕಚ್ಚಾಡಿ ದ್ವೇಷಿಸಿದ" ಹಾಗೆ, ವಿಶ್ವದ ಪಕ್ಷಗಳ "ಅಂತರ-ಪಕ್ಷ" ಹೋರಾಟವನ್ನು ನಡೆಸಲು ಸಾಧ್ಯವಿಲ್ಲ. ಈ ದಾರಿ ವಿನಾಶಕಾರಿಯಾದದ್ದು. ಅಂತರರಾಷ್ಟ್ರೀಯ ಸಮತಾವಾದಿ ಚಳುವಳಿಗೆ ಮತ್ತು ಮಾರ್ಕ್ಸ್‌ವಾದ-ಲೆನಿನ್‌ವಾದಕ್ಕೆ ಈ ವಿನಾಶವನ್ನು ತಪ್ಪಿಸುವಷ್ಟು ಅಂತರಿಕ ಸತ್ವವಿದೆಯೆಂಬ ಭರವಸೆ ನಮಗಿದೆ.

ಚೀನಾ ಮತ್ತು ವಿಯೆಟ್ನಾಂನ ಎರಡು ಸಮಾಜವಾದಿ ದೇಶಗಳ ನಡುವೆ ಆರಂಭವಾದ ಯುದ್ಧದ ಹೊಸ ಬೆಳವಣಿಗೆಯನ್ನು ಚರ್ಚಿಸುವಾಗ, 20 ವರ್ಷಗಳ ಹಿಂದೆ ಆರಂಭವಾದ ಸಿ.ಪಿ.ಎಸ್.ಯು. ಮತ್ತು ಸಿ.ಪಿ.ಸಿ. ಗಳ ನಡುವಿನ ಭಿನ್ನಾಭಿಪ್ರಾಯಗಳು ಮತ್ತು ಕಲಹಗಳ ಉಗಮ ಮತ್ತು ಬೆಳವಣಿಗೆಯನ್ನು ಚರ್ಚಿಸುವುದೂ ಅವಶ್ಯಕವಾಗಿದೆ. ಅದು, ವಿಶ್ವಸಮತಾವಾದಿ ಚಳುವಳಿಯೊಳಗಿನ ರಾಜಕೀಯ ಸೈದ್ಧಾಂತಿಕ ವ್ಯತ್ಯಾಸಗಳಾಗಿ ಆರಂಭವಾಯಿತು. ಒಂದು ಕಡೆ ಸೋವಿಯತ್ ದೇಶದ ಪಕ್ಷ, ಇನ್ನೊಂದು ಕಡೆ ಚೀನದ ಪಕ್ಷ ನಿಂತು ಈ ವ್ಯತ್ಯಾಸಗಳನ್ನು ಬೆಳೆಸಿದವು. ಈ ವ್ಯತ್ಯಾಸಗಳನ್ನು ಚರ್ಚೆಗಳ ಮೂಲಕ ಪರಿಹರಿಸಲು ಮೊದಲು 1957ರ ಮಾಸ್ಕೊ ಒಪ್ಪಂದ ಮತ್ತು ನಂತರ 1960ರಲ್ಲಿ 81 ಪಕ್ಷಗಳ ಮಾಸ್ಕೊ ಹೇಳಿಕೆ ಪ್ರಯತ್ನಿಸಿತು. ಈ ಎರಡೂ ವಿಶ್ವಕಮ್ಯುನಿಸ್ಟ್ ದಾಖಲೆಗಳೂ, ಬಲ ಪರಿಷ್ಕರಣವಾದದ ವಿರುದ್ಧ ಹೋರಾಟ ನಡೆಸುವುದನ್ನು ಒತ್ತಿಒತ್ತಿ ಹೇಳಿದವು. 81 ಪಕ್ಷಗಳ ಹೇಳಿಕೆಯ ಕೆಲವು ಮುಖ್ಯ ಭಾಗಗಳನ್ನು ವಾಚಿಸುವುದಾದರೆ, "ಮಾರ್ಕ್ಸ್‌ವಾದ-ಲೆನಿನ್‌ವಾದದ ಪಥದಿಂದ ವಿಮುಖವಾಗಲೆತ್ನಿಸುವ ಕೆಲವು ಪರಿಷ್ಕರಣವಾದಿಗಳನ್ನು ಎರಡು ಪಕ್ಷಗಳೂ ಸೈದ್ಧಾಂತಿಕವಾಗಿ ಸೋಲಿಸಿವೆ. ಪರಿಷ್ಕರಣವಾದ, ಬಲಪಂಥೀಯ ಅವಕಾಶವಾದಗಳ ವಿರುದ್ಧ ನಡೆಸುವ ಹೋರಾಟದಲ್ಲಿ ಪ್ರತಿ ಕಮ್ಯುನಿಸ್ಟ್ ಪಕ್ಷ ಮತ್ತು ಅಂತರರಾಷ್ಟ್ರೀಯ ಸಮತಾವಾದಿ ಚಳುವಳಿಗಳು ಸೈದ್ಧಾಂತಿಕವಾಗಿ ಮತ್ತು ಸಂಘಟನಾತ್ಮಕವಾಗಿ ಇನ್ನೂ ಹೆಚ್ಚು ಬಲ ಪಡೆದಿವೆ". "1957ರ ಮಾಸ್ಕೋ ಒಪ್ಪಂದದಲ್ಲಿರುವ ಹಾಗೆ, ಮುಖ್ಯ ಅಪಾಯವಾದ ಪರಿಷ್ಕರಣವಾದ ಮತ್ತು ತತ್ವಶರತೆ ಮತ್ತು ಗುಂಪುಗಾರಿಕೆಗಳ ವಿರುದ್ಧ ಹೋರಾಟವನ್ನು ಮುಂದುವರೆಸುವಂತೆ ಕಮ್ಯುನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ ಚಳುವಳಿಯು ಕರೆ ನೀಡುತ್ತದೆ.

ಈ ಹೋರಾಟಕ್ಕೆ ಮತ್ತು ಎರಡು ವಿಶ್ವದಾಖಲೆಗಳಿಗೆ ಯಾವ ಗತಿ ಆಯಿತು ಎಂಬುದು ಪ್ರತ್ಯೇಕ ಅಭ್ಯಾಸಕ್ಕೆ ಅರ್ಹವಾದ ವಿಷಯ. ಏನನ್ನಾದರೂ ಇದರ ಬಗ್ಗೆ ಹೇಳುವುದಾದರೆ, ಸೋವಿಯತ್ ಒಕ್ಕೂಟ ಮತ್ತು ಚೀನಗಳ ಎರಡು ದೊಡ್ಡ ಕಮ್ಯುನಿಸ್ಟ್ ಪಕ್ಷಗಳೂ ಈ ದಾಖಲೆಗಳನ್ನು ಅಕ್ಷರಶಃ ಮೂಲೆಗೊತ್ತರಿಸಿದವು ಎನ್ನಬಹುದು. ಕಾಲಕಳೆದಂತೆ, 1960ರಿಂದಲೇ ಬಲ ಪರಿಷ್ಕರಣವಾದದ ಬಗ್ಗೆ ಹೋರಾಟದ ಬಾವುಟವನ್ನು ಎತ್ತಿಹಿಡಿದು, ಉಗ್ರವಾಮವಾದ ಮತ್ತು ಪುಟ್ಟ ಬಂಡವಾಳಶಾಹಿ ಸಾಹಸವಾದಕ್ಕೆ ಜಾರುತ್ತಿದ್ದ ಚೀನದ ಕಮ್ಯುನಿಸ್ಟ್ ಪಕ್ಷವು 1965-66ರಲ್ಲಿ ಇದನ್ನು ಪೂರ್ಣವಾಗಿ ಖಂಡಿಸಿತು. ಸೋವಿಯತ್ ಒಕ್ಕೂಟವನ್ನು "ಸಮಾಜವಾದಿ-ಸಾಮ್ರಾಜ್ಯಶಾಹಿ" ಎಂದು ಹೀಗಳೆದದ್ದು ಮತ್ತು ಶಾಂತಿ ಮತ್ತು ಮಾನವವರ್ಗಕ್ಕೆ ರಷ್ಯವೇ ಮುಖ್ಯ ಶತ್ರುವಾದ್ದರಿಂದ, ಅಂತರರಾಷ್ಟ್ರೀಯ ಸಾಮ್ರಾಜ್ಯಶಾಹಿಯೂ ಸೇರಿದಂತೆ ಜಗತ್ತಿನಾದ್ಯಂತ ಸಂಯುಕ್ತ ರಂಗವೊಂದು ಅದರ ವಿರುದ್ಧ ಹೋರಾಡಬೇಕೆಂದು ಕರೆ ಇತ್ತದ್ದು-ಇವೆಲ್ಲವು ಚೀನದ ಉಗ್ರವಾಮವಾದಿ ನೀತಿಯ ಶಿಖರಪ್ರಾಯ ಹೇಳಿಕೆಗಳು. ಆಗ್ನೇಯ ಏಷ್ಯಾದಲ್ಲಿ ವಿಯಟ್ನಾಂ ಸೋವಿಯತ್ ಸಮಾಜವಾದಿ ಸಾಮ್ರಾಜ್ಯಶಾಹಿಯ ಚಿಕ್ಕಠಾಣೆಯ ಹಾಗೆ ಕೆಲಸಮಾಡುತ್ತಿದೆಯೆಂಬ ಆಪಾದನೆ ಮತ್ತು ಅದರ ಮೇಲೆ ಯುದ್ಧ ಹೂಡಿರುವುದು ಇದೂ ಕೂಡ ಅದೇ ಅಪಾಯಕಾರಿ ಧೋರಣೆಯ ಇನ್ನೊಂದು ಮುಖ. ಇದು ಸಮಾಜವಾದಿ ವಿಯಟ್ನಾಮಿನ ಮೇಲೆ ಚೀನವು ನಡೆಸಿದ ಆಕ್ರಮಣದ ಬಗ್ಗೆ ನಮಗಿರುವ ಅಭಿಪ್ರಾಯ ಮತ್ತು ಚೀನದ ಸದ್ಯದ ವಿದೇಶಿ ನೀತಿಯ ಬಗ್ಗೆ ನಮ್ಮ ವಿಮರ್ಶೆಯೂ ಇದೇ. ಇದು ಅಸಹನೆಯಿಂದಲಾಗಲೀ ಅಥವಾ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬಗ್ಗೆ ಚೀನದ ಕಮ್ಯುನಿಸ್ಟ್ ಪಕ್ಷವು ಹಲವಾರು ವರ್ಷಗಳಿಂದ ತೋರಿಸುತ್ತಿರುವ ಕೆಟ್ಟವರ್ತನೆಯಿಂದಾಗಲೀ ಪ್ರೇರಿತವಾದದ್ದಲ್ಲ. ಅಲ್ಲದೆ, ಸೋವಿಯತ್ ಕಮ್ಯುನಿಸ್ಟ್ ಪಕ್ಷದ ನಾಯಕರು ಮತ್ತು ವಿಶ್ವಚಳುವಳಿಯ ಇತರರ ಬಲಪರಿಷ್ಕರಣವಾದಿ ವರ್ತನೆಯ ಬಗ್ಗೆ ನಾವು ನಡೆಸುತ್ತಿರುವ ನೀತಿಬದ್ಧ ಹೋರಾಟದಲ್ಲಿ ರಾಜಿ ಮಾಡಿಕೊಂಡದ್ದೂ ಅಲ್ಲ.

ಕಳೆದ ಹತ್ತು-ಹನ್ನೆರಡು ವರ್ಷಗಳಿಂದಲೂ ಆಂತರಿಕ ಮತ್ತು ವಿದೇಶಿ ವಿಚಾರಗಳಲ್ಲಿ ಪಕ್ಷದ ನಾಯಕರು ಅನುಸರಿಸುತ್ತಿರುವ ರಾಜಕೀಯ ನೀತಿಯು ಮಾರ್ಕ್ಸ್‌ವಾದ-ಲೆನಿನ್‌ವಾದದ ಮಾರ್ಗವನ್ನು ಬಿಟ್ಟು ಅಪಾಯಕಾರಿಯಾಗಿ ದೂರಹೋಗಿದೆ ಎಂಬುದು, 1976ರ ಸೆಪ್ಟೆಂಬರ್‌ನಲ್ಲಿ ಮಾವೋತ್ಸೆತುಂಗರ ಮರಣಾನಂತರ ಚೀನದ ಕಮ್ಯುನಿಸ್ಟ್ ಪಕ್ಷದ ನಾಯಕರು ನೀಡುತ್ತಿರುವ ಹೇಳಿಕೆಗಳು ಮತ್ತು ಅನುಸರಿಸುತ್ತಿರುವ ಕ್ರಮಗಳಿಂದ ಸ್ಪಷ್ಟವಾಗುತ್ತದೆ. ಈಗಿನ ನಾಯಕರು "ದುಷ್ಟ ಚತುಷ್ಟಯ ಮತ್ತು ಲಿನ್‌ಪಿಯಾವೋ" ವಿರುದ್ಧ ನಡೆಸಿದ ಉಗ್ರಹೋರಾಟವು, ಹತ್ತುವರ್ಷಗಳಿಂದಲೂ ಚೀನದಲ್ಲಿ ಬೋಧಿಸಿ, ಆಚರಿಸಿದ ಉಗ್ರವಾಮವಾದಿ ಮತ್ತು ಪೆಟ್ಟಿಬೂರ್ಜ್ವಾ (ಪುಟ್ಟ ಬಂಡವಾಳಶಾಹಿ) ಅರಾಜಕತಾವಾದಿ ನೀತಿಗಳ ವಿರುದ್ಧ ನಡೆಸಿದ ಹೋರಾಟವೇ ಆಗಿದೆ. ಈ ವಿನಾಶಕಾರಿ ಉಗ್ರವಾಮವಾದಿ ಮತ್ತು ಅರಾಜಕತಾವಾದಿ ನೀತಿಗಳನ್ನು ಆಂತರಿಕ ಕ್ಷೇತ್ರದಲ್ಲಿ ಮಾತ್ರ ಅನ್ವಯಿಸಿ, ವಿದೇಶಿ ನೀತಿಯ ವಿಚಾರದಲ್ಲಿ ಸರಿಯಾದ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ನೀತಿಯನ್ನು ಅನುಸರಿಸುತ್ತಿದ್ದ ಎಂದು ಯಾವನಾದರೂ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಭಾವಿಸಲು ಸಾಧ್ಯವೇ ?

"ದುಷ್ಟ ಚತುಷ್ಟಯ" ದ ವಿರುದ್ಧ ನಡೆದ ಹೋರಾಟದಿಂದ ಈ ಗುಂಪು ಅಷ್ಟು ದೀರ್ಘಕಾಲ ಹೇಗೆ ಕೆಡುಕುಮಾಡಿತು ಎಂಬುದರ ವಿವರಣೆ ಸಿಗುವುದಿಲ್ಲ. ಅಲ್ಲದೆ ಈ "ಗುಂಪು" ಹೀಗೆ ಕೆಟ್ಟದಾಗಿ ನಡೆದುಕೊಳ್ಳುತ್ತಿದ್ದ ಆ ಸಮಯದಲ್ಲಿ ಚೀನದ ಕಮ್ಯುನಿಸ್ಟ್ ಪಕ್ಷ, ಕೇಂದ್ರ ಸಮಿತಿ, ಪಾಲಿಟ್‌ಬ್ಯೂರೋ, ಅಧ್ಯಕ್ಷ ಮಾವೋತ್ಸೆತುಂಗ್ ಇವರೆಲ್ಲ ಏನು ಮಾಡುತ್ತಿದ್ದರು ಎಂಬ ಪ್ರಶ್ನೆಗೂ ವಿವರಣೆ ಸಿಗುವುದಿಲ್ಲ.

ಚೀನದ ವರ್ತನೆಯ ಬಗ್ಗೆ ರಾಜಕೀಯ ತೀರ್ಮಾನಗಳನ್ನು ಯಾರು ಬೇಕಾದರೂ ಕೈಗೊಳ್ಳಲು, ಚೀನದ ಕಮ್ಯುನಿಸ್ಟ್ ಪಕ್ಷದ ನಾಯಕರ ಬರವಣಿಗೆಗಳು ಮತ್ತು ಹೇಳಿಕೆಗಳಿಂದ ಕೆಲವು ಭಾಗಗಳನ್ನು ತೆಗೆದು ಹೇಳಿದರೆ ಸಾಕು.

"ಲಿನ್‌ಪಿಯಾವೋ ಮತ್ತು ದುಷ್ಟ ಚತುಷ್ಟಯದ ಪ್ರವೇಶ ಮತ್ತು ಅವರು ಮಾಡಿದ ಕೆಡುಕಿನಿಂದ ನಮ್ಮ ಸಮಯದಲ್ಲಿ ಹತ್ತುವರ್ಷಗಳು ಅನ್ಯಾಯವಾದುದರಿಂದ ಎರಡು ಹಂತದ ಯೋಜನೆಯನ್ನು ಮುಂದಿಡಲಾಯಿತು. ಕಳೆದ ವರ್ಷಗಳ ಅನ್ಯಾಯವನ್ನು ಸರಿಪಡಿಸುವ ಮನಸ್ಸು ಮತ್ತು ನಂಬಿಕೆ ನಮಗಿದೆ."

"ದುಷ್ಟಚತುಷ್ಟಯವು ಅಧಿಕಾರವನ್ನು ಕಸಿಯುವ ತನ್ನ ನಿಷ್ಫಲ ಪ್ರಯತ್ನದಲ್ಲಿ ಆರ್ಥಿಕ ಸ್ಥಿತಿಯನ್ನೂ ತಾಂತ್ರಿಕ ಪ್ರಗತಿಯನ್ನೂ ಹಾಳು ಮಾಡಿತು."

"......ತಮ್ಮ ಉಗ್ರವಾಮವಾದಿ ಘೋಷಣೆಗಳಿಂದ ಅವರು ಮಾರ್ಕ್ಸ್‌ವಾದ-ಲೆನಿನ್‌ವಾದಕ್ಕೆ ಮತ್ತು ಮಾವೋತ್ಸೆತುಂಗ್ ಆಲೋಚನೆಗೆ ವಿರೋಧವಾಗಿ ನಡೆದುಕೊಂಡರು. ಅವರು ಎರಡು 'ದೊಡ್ಡ ಕೋಲು'ಗಳನ್ನು ಉಪಯೋಗಿಸಿದರು. ಒಂದನೆಯದು, 'ಬರೀ ಉತ್ಪಾದನೆ ಮಾಡುತ್ತಿದ್ದೀರೆ ಹೊರತು ಕ್ರಾಂತಿ ಮಾಡುತ್ತಿಲ್ಲ' ಎಂದು ಯಾವುದೇ ಘಟಕದ ಬಗ್ಗೆ ಆಪಾದಿಸುವುದು, ಇದರಿಂದ ಅನೇಕ ಕಾರ್ಖಾನೆಗಳಲ್ಲಿ ಉತ್ಪಾದನೆ ಇಳಿದು, ಕೆಲವೆಡೆ ನಿಂತೇ ಹೋಯಿತು. ಅನೇಕ ವರ್ಷಗಳು ಹೀಗೆ ನಡೆದದ್ದರಿಂದ ಆರ್ಥಿಕತೆಯು ಕುಸಿಯುವಂತಾಯಿತು".

"ಎರಡನೆಯದು, ಪ್ರಜಾಸತ್ತಾತ್ಮಕ ಕ್ರಾಂತಿಯ ಅವಧಿಯ ಎಲ್ಲ ಹಳೆ ಕಾಮ್ರೇಡುಗಳನ್ನೂ ಅವರು ಕಮ್ಯುನಿಸ್ಟರಲ್ಲ, ಬಂಡವಾಳಶಾಹಿಪಥಗಾಮಿಗಳು ಎಂದು ಜರೆಯುವುದು. ಈ ದಂಡವನ್ನು ಉಪಯೋಗಿಸಿ ಅವರು, ಅನೇಕ ಸಂಖ್ಯೆಯ ಹಳೆ ಕ್ರಾಂತಿಕಾರಿಗಳ ವಿರುದ್ಧ ಆಪಾದನೆಗಳನ್ನು ಸಿದ್ಧಪಡಿಸಿದರು. ಇದರಿಂದ ಅನೇಕರು ತಮ್ಮ ಜೀವಗಳನ್ನು ಕಳೆದುಕೊಂಡರು. ಅನೇಕರು ದೈಹಿಕವಾಗಿ ಅಂಗವಿಹೀನರಾದರು. ಅನೇಕರನ್ನು ದೀರ್ಘವರ್ಷಗಳವರೆಗೆ ಸೆರೆಯಲ್ಲಿಡಲಾಯಿತು. ಗುಂಪುಸಭೆಗಳಲ್ಲಿ, ಎನ್.ಪಿ.ಸಿ.ಯ ಮತ್ತು ಸಿ.ಪಿ.ಪಿ.ಸಿ.ಸಿ.ಯ ಸದಸ್ಯರು, ಅವರನ್ನು ದುಷ್ಟ ಚತುಷ್ಟಯವು ಹೇಗೆ ಶಿಕ್ಷಿಸುತ್ತಿದೆಯೆಂಬುದರ ಬಗ್ಗೆ ಹೇಳುತ್ತಿದ್ದರು. ನನ್ನ ಗುಂಪಿನಲ್ಲಿ, ಒಬ್ಬ ಶಾಂಘಾಯ್ ವಿಜ್ಞಾನಿಯ ದುಷ್ಟಗುಂಪಿನಿಂದ ತನಗಾದ ಹಿಂಸೆಯನ್ನು ಇನ್ನೊಬ್ಬ ವಿಜ್ಞಾನಿಗೆ ಹೇಗೆ ಹಿಂಸೆಕೊಟ್ಟು ಹಣೆಗೆ ನೈಟ್ರಿಕ್‌ಆಮ್ಲ ಹಚ್ಚಲಾಯಿತು ಎಂಬುದನ್ನು ಹೇಳಿದ". (ಚೀನ ರಿಕನ್‌ಸ್ಟ್ರಕ್ಟ್ಸ್, ಜೂನ್ 1978ರ ಸಂಚಿಕೆಯಿಂದ)

ಅಮೆರಿಕದ ಟೈಮ್ ಪತ್ರಿಕೆಗೆ ನೀಡಿದ ವಿಶಾಲ ಪ್ರಸಾರ ಪಡೆದುಕೊಂಡ ಸಂದರ್ಶನದಲ್ಲಿ, ಚೀನದ ಪಕ್ಷದ ಕೇಂದ್ರ ಸಮಿತಿಯ ಉಪಾಧ್ಯಕ್ಷರಾದ ಡೆಂಗ್‌ಕ್ಸಿಯೋಪಿಂಗ್ ಅವರು, "ದುಷ್ಟಚತುಷ್ಟಯ"ವು ಜನತೆಯ ಜೀವಗಳನ್ನು ತುಂಬಾ ಹಿಂಸಿಸಿತು ಎಂದು ಒಪ್ಪಿಕೊಂಡಿದ್ದಾರೆ. "ಅದನ್ನು ನಿರ್ಮೂಲಮಾಡಲು ನಮಗೆ ಸಾಕಷ್ಟು ಸಮಯ ಬೇಕು. ದುಷ್ಟ ಚತುಷ್ಟಯವು ಹತ್ತು ವರ್ಷಗಳಿಗಿಂತಲೂ ಹೆಚ್ಚು ಕಾಲ ದೌರ್ಜನ್ಯ ನಡೆಸಿದೆ ಎಂಬುದು ನಿಮಗೆ ಗೊತ್ತಿದೆ. ಅಶಿಸ್ತಿನ ವರ್ತನೆ ತುಂಬಾ ಹೆಚ್ಚಿದೆ. ಈ ಕ್ಷೇತ್ರದಲ್ಲಿ ನಾವು ಶೀಘ್ರಗತಿಯಲ್ಲೇ ರಿಪೇರಿ ನಡೆಸುತ್ತಿದ್ದೇವೆ. ಆದರೆ ಶಿಕ್ಷಣ ಕ್ಷೇತ್ರ ನಮಗೆ ದೊಡ್ಡ ಸಮಸ್ಯೆಯಾಗಿದೆ. ಓದದವರನ್ನು, ಕೆಲಸ ಮಾಡದವರನ್ನು ಹೀರೋಗಳೆಂದು ದುಷ್ಟಚತುಷ್ಟಯವು ಅನೇಕ ವರ್ಷಗಳವರೆಗೆ ಗೌರವಿಸಿತ್ತು. ಈಗ ಜನ ಕೆಲಸ ಮಾಡಲೇಬೇಕಾಗಿದೆ. ವಿಜ್ಞಾನ ಮತ್ತು ತಾಂತ್ರಿಕಜ್ಞಾನವೂ ಸೇರಿದಂತೆ ಶಿಕ್ಷಣದಲ್ಲಿ ಒಂದು ಪೀಳಿಗೆಯೇ ವಂಚಿತವಾಗಿದೆ. ಇದನ್ನು ಸರಿಪಡಿಸಲು ನಮಗೆ ಸಾಕಷ್ಟು ಸಮಯ ಮತ್ತು ಪ್ರಯತ್ನ ಬೇಕಾಗಿದೆ."

ಚೀನದ ನಾಯಕರು ಈ ದಶಕದ ಅವಧಿ ಬಗ್ಗೆ ಮತ್ತು "ದುಷ್ಟಚತುಷ್ಟಯ"ವು ನಡೆಸಿದ ಹಾನಿಯ ಬಗ್ಗೆ ಇತ್ತ ಹೇಳಿಕೆಗಳು ಜನತಾಚೀನದ ಆಂತರಿಕ ರಾಜಕೀಯದಲ್ಲಿ ನಡೆದ ಅಪರಾಧಗಳ ಮಟ್ಟವನ್ನು ತೋರಿಸುತ್ತವೆ. 1966-76ರ ವರೆಗಿನ ವರ್ಷಗಳಲ್ಲಿ ಮಾವೋತ್ಸೆತುಂಗ್ ನೇತೃತ್ವದಲ್ಲಿ ನಡೆದ "ಸಾಂಸ್ಕೃತಿಕ ಕ್ರಾಂತಿ"ಯ ಅವಧಿ ಕೂಡ ಇದೇ. ಈ ಹತ್ತು ವರ್ಷಗಳಲ್ಲಿ ಜನತಾಚೀನದ ಆಂತರಿಕ ಜೀವನದಲ್ಲಿ ನಡೆದ ಈ ಕೋಲಾಹಲದ ಪರಿಣಾಮವು ಅದರ ವಿದೇಶಿ ನೀತಿಯ ಮೇಲೆ ಏನೂ ಆಗಲಿಲ್ಲವೆಂದರೆ ಯಾವ ಮಾರ್ಕ್ಸ್‌ವಾದಿಯಾದರೂ ನಂಬಲು ಸಾಧ್ಯವೆ ? ಈ ದೀರ್ಘ ಅವಧಿಯಲ್ಲಿ ಆಂತರಿಕ ನೀತಿಗಳು ಮಾತ್ರ ಉಗ್ರವಾಮವಾದಿಯಾಗಿ ಮತ್ತು ಸಾಹಸವಾದಿಯಾಗಿದ್ದು, ವಿದೇಶಿ ನೀತಿಯು ಸರಿಯಾದ ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಆಧರಿಸಿತ್ತು ಎನ್ನುವುದು ವಾಸ್ತವವೆ ? ಪಕ್ಷವನ್ನು ಮತ್ತು ಜನತಾಚೀನದ ಸಾರ್ವಜನಿಕ ಜೀವನವನ್ನು ಆಳುತ್ತಿದ್ದ "ದುಷ್ಟಕೂಟ"ವು ಬಲಪರಿಷ್ಕರಣವಾದದ ವಿರುದ್ಧ ಕ್ರಮಬದ್ಧವಾದ ಹೋರಾಟವನ್ನು ನಡೆಸುತ್ತದೆ ಎಂದರೆ ನಂಬಲು ಸಾಧ್ಯವೆ ?

1960-62ರ ಅವಧಿಯಲ್ಲಿ ಚೀನದ ಕಮ್ಯುನಿಸ್ಟ್ ಪಕ್ಷವು ಪರಿಷ್ಕರಣವಾದದ ವಿರುದ್ಧ ನಡೆಸಿದ ಹೋರಾಟವು, ಉಗ್ರಎಡವಾದ ಮತ್ತು ಪೆಟ್ಟಿಬೂರ್ಜ್ವಾ ಅರಾಜಕತಾವಾದದ ಕಲಹವಾಗಿ ಕೆಳಮಟ್ಟಕ್ಕಿಳಿದು, ಮಾರ್ಕ್ಸ್‌ವಾದ - ಲೆನಿನ್‌ವಾದದಿಂದ ತುಂಬ ದಾರಿತಪ್ಪಿದೆ. ಮಾವೋತ್ಸೆತುಂಗರ ಮರಣಾನಂತರ ಆರಂಭವಾದ ತಿದ್ದುಕೊಳ್ಳುವಿಕೆಯು ಪಾಕ್ಷಿಕವಾಗಿದ್ದು ಪೂರ್ಣತೆಯನ್ನು ಪಡೆದಿಲ್ಲ. 1966-76ರವರೆಗೆ ಚೀನದ ಕಮ್ಯುನಿಸ್ಟ್ ಪಕ್ಷ ಅನುಸರಿಸಿದ ವಿಕೃತಗೊಳಿಸಿದ ನೀತಿಯ ಮುಂದುವರಿಕೆಯೇ ವಿಯೆಟ್ನಾಮಿನ ಮೇಲಿನ ದಾಳಿ. ಚೀನದ ಕಮ್ಯುನಿಸ್ಟ್ ಪಕ್ಷದ ನಾಯಕರು ಈ ವಿನಾಶಕಾರಿ ನೀತಿಯನ್ನು ಬಿಟ್ಟು ಮಾರ್ಕ್ಸ್‌ವಾದ-ಲೆನಿನ್‌ವಾದದ ಪಥಕ್ಕೆ ಹಿಂತಿರುಗುವಂತೆ ಹೇಳಲು ಜಗತ್ತಿನಾದ್ಯಂತ ಎಲ್ಲ ಸಮತಾವಾದಿಗಳಿಗೂ ಹಕ್ಕಿದೆ.

ವಿವಾದಕ್ಕೊಳಗಾದ ಎಲ್ಲ ಸಮಸ್ಯೆಗಳ ಬಗ್ಗೆ ಶಾಂತಿಯುತವಾಗಿ ಚರ್ಚಿಸಿ ಒಪ್ಪಂದಕ್ಕೆ ಬರಲು ವಿಯೆಟ್ನಾಮಿಗೆ ಸಾಧ್ಯವಾಗುವ ಹಾಗೆ, ಅವರ ನೆಲದಿಂದ ಎಲ್ಲ ಚೀನೀ ಸೈನ್ಯಗಳನ್ನು ವಾಪಸ್ಸು ಕರೆಸಿಕೊಳ್ಳುವಂತೆ ನಾವು

[೬ನೇ ಪುಟ ನೋಡಿ]

ಕೇಂದ್ರದ ಮುಂಗಡ ಪತ್ರ

[3ನೇ ಪುಟದಿಂದ]

ಮತ್ತು ಪೇಟೆಪಟ್ಟಣಗಳ ಬಡಜನತೆಯ ಹಾಗೂ ಮಧ್ಯಮವರ್ಗದವರ ದಿನಬಳಕೆಯ ವಸ್ತುಗಳಾಗಿವೆ. ಆದುದರಿಂದ, ಅವರ ಜೀವನಾವಶ್ಯಕ ವಸ್ತುಗಳ ಬೆಲೆ ಏರಿ, ಅವರ ಗ್ರಾಹಕ ಶಕ್ತಿಯು ಇನ್ನಷ್ಟು ಕ್ಷಯಿಸುವುದು. ಈಗಾಗಲೇ ಕೈಗಾರಿಕೆಗಳು ಮಾರುಕಟ್ಟೆಯ ಅಭಾವದಿಂದಾಗಿ ತಮ್ಮ ತುಂಬು ಸಾಮರ್ಥ್ಯದಿಂದ ಉತ್ಪಾದನೆ ಮಾಡುತ್ತಿಲ್ಲ. ಹೊಸಕರಭಾರವು ಬೆಲೆಏರಿಕೆ ಹಾಗೂ ನಿರುದ್ಯೋಗ ಸಮಸ್ಯೆಗಳನ್ನು ಇನ್ನಷ್ಟು ಉಲ್ಬಣಗೊಳಿಸುವುದು. ಬೆಂಕಿಪೆಟ್ಟಿಗೆಯ ಮೇಲಿನ ತೆರಿಗೆಯ ಹೆಚ್ಚಳದಿಂದಾಗಿ, ಮದರಾಸಿನಲ್ಲಿ ವಿಮ್ಕೋ ಕಂಪನಿಯವರು 500 ಜನರನ್ನು ಕೆಲಸದಿಂದ ತೆಗೆದುಹಾಕಿರುವುದು ವರದಿಯಾಗಿದೆ. ಇದು ಮುಂದೆ ಒದಗಬಹುದಾದ ತೀವ್ರ ಆರ್ಥಿಕ ಬಿಕ್ಕಟ್ಟಿನ ಸಂಕೇತವಾಗಿದೆ.

ಅಪ್ರತ್ಯಕ್ಷ ತೆರಿಗೆಯ ಭಾರದೊಂದಿಗೇ, ರೂ. 1355 ಕೋಟಿಯಷ್ಟು ಕೊರತೆ ಹಣ ಸೃಷ್ಟಿಮಾಡುವ ಪ್ರಸ್ತಾವವೂ ಈ ವರುಷದ ಮುಂಗಡಪತ್ರದಲ್ಲಿದೆ. ಪ್ರತಿ ಪಂಚವಾರ್ಷಿಕ ಯೋಜನೆಗಳಲ್ಲೂ, ಪ್ರತಿವರ್ಷವೂ ಕೊರತೆ ಹಣ ಸೃಷ್ಟಿಯು ಹೆಚ್ಚುತ್ತಲೇ ಇದ್ದು ಬೆಲೆಏರಿಕೆ ಮತ್ತು ಹಣದುಬ್ಬರಕ್ಕೆ ಕಾರಣವಾಗುತ್ತಿದೆ. 1977-78ರಲ್ಲಿ ಕೊರತೆ ಹಣ ಸೃಷ್ಟಿಯು ರೂ. 975 ಕೋಟಿಯಷ್ಟಾಗಿದ್ದರೆ, 1978-79 ರಲ್ಲಿ ರೂ. 2145 ಕೋಟಿಗೇರಿದೆ. ಕಳೆದ ವರುಷದ ಕೊರತೆಹಣ ಸೃಷ್ಟಿಯು ಅತ್ಯಂತ ದೊಡ್ಡ ದಾಖಲೆಯಾಗಿದ್ದು, 1978-79ರ ಮುಂಗಡಪತ್ರದಲ್ಲಿ ನಿರೀಕ್ಷಿಸಿದುದರ ಇಮ್ಮಡಿಯಷ್ಟಾಗಿದೆ. ಆರನೇ ಪಂಚವಾರ್ಷಿಕ ಯೋಜನೆ (1978-83) ಯ ಅವಧಿಯಲ್ಲಿ ಒಟ್ಟು ರೂ. 2226 ಕೋಟಿ ಕೊರತೆ ಹಣ ಸೃಷ್ಟಿಯ ಅಂದಾಜು ಮಾಡಿರುವುದಾದರೂ, ಯೋಜನೆಯ ಮೊದಲ ಎರಡು ವರುಷಗಳಲ್ಲಿಯೇ ರೂ. 3500 ಕೋಟಿಗಿಂತಲೂ ಹೆಚ್ಚು ಕೊರತೆಹಣ ಸೃಷ್ಟಿಯಾಗಲಿದೆ. ಸಂಸತ್ತಿನ ಮತ್ತು ಸಾರ್ವಜನಿಕ ಅಭಿಪ್ರಾಯಗಳಿಗೆ ಮಣಿದು ಅಪ್ರತ್ಯಕ್ಷ ತೆರಿಗೆಗಳಲ್ಲಿ ಕೆಲವು ಕೋಟಿಗಳಷ್ಟು ಕಡಿಮೆಮಾಡಲಾಗಿ, ಕೊರತೆಹಣ ಸೃಷ್ಟಿಯು ಇನ್ನಷ್ಟೂ ಹೆಚ್ಚದಿರಲಾರದು.

ಇಷ್ಟಲ್ಲದೆ, ಕೇಂದ್ರ ಸರ್ಕಾರವು ಮುಂದಿನ ವರುಷದಲ್ಲಿ ರೂ. 1850 ಕೋಟಿ ಸಾರ್ವಜನಿಕ ಸಾಲ ಎತ್ತುವ ಸೂಚನೆಯೂ ಮುಂಗಡಪತ್ರದಲ್ಲಿದೆ. 1975-76ರಲ್ಲಿ ಇಂತಹ ಸಾಲವು ರೂ. 456 ಕೋಟಿಯಷ್ಟೇ ಆಗಿದ್ದು, ಈಗ ಅದರ ನಾಲ್ಕುಪಟ್ಟು ಹೆಚ್ಚಿರುವುದನ್ನು ಗಮನಿಸಬಹುದು. ಹೀಗೆ, ಅಪ್ರತ್ಯಕ್ಷ ತೆರಿಗೆ, ಕೊರತೆಹಣಸೃಷ್ಟಿ ಮತ್ತು ಸಾರ್ವಜನಿಕ ಸಾಲಗಳಿಂದ ಸಂಪನ್ಮೂಲಗಳನ್ನು ಒದಗಿಸಿಕೊಳ್ಳುವುದರಿಂದ ಬೆಲೆ ಏರಿಕೆ ಮತ್ತು ಹಣದುಬ್ಬರವು ಗಣನೀಯವಾಗಿ ಹೆಚ್ಚುವುದು. ಇಷ್ಟೊಂದು ಪ್ರಮಾಣದಲ್ಲಿ ಸಂಪನ್ಮೂಲಗಳನ್ನು ಸಂಗ್ರಹಿಸಿದ್ದರೂ 1978-79 ಮತ್ತು 1979-80 ರಲ್ಲಿ ಕೇಂದ್ರದ ಅಭಿವೃದ್ಧಿ ಯೋಜನೆಯ ವೆಚ್ಚವು ಅನುಕ್ರಮವಾಗಿ ರೂ. 201 ಕೋಟಿ ಮತ್ತು ರೂ. 179 ಕೋಟಿಯಷ್ಟು ಕಡಿಮೆಯಾಗಿದ್ದು, ಉತ್ಪಾದನೆಯು ಕುಂಠಿತವಾಗಿ, ಬೆಲೆ ಏರಿಕೆ ಇನ್ನಷ್ಟು ಹೆಚ್ಚುವುದು ಎಂದು ಮುಂಬಯಿಯ ಇಕನಾಮಿಕ್ ಮತ್ತು ಪೊಲಿಟಿಕಲ್ ವೀಕ್ಲಿ ತನ್ನ ಮಾರ್ಚ್ 3, 1979 ರ ಸಂಚಿಕೆಯಲ್ಲಿ ತಿಳಿಸಿದೆ. ಮುಂಗಡಪತ್ರದ ಸೂಚನೆಗಳಿಂದ ಬೆಲೆಗಳು ಶೇ. 1 ಕ್ಕಿಂತ ಹೆಚ್ಚು ಏರಲಾರದು ಎಂದು ಹಣಕಾಸು ಖಾತೆಯ ವಕ್ತಾರರು ಹೇಳಿರುವುದನ್ನು ಅನೇಕ ಸಂಸತ್ ಸದಸ್ಯರೂ, ಅರ್ಥಶಾಸ್ತ್ರಜ್ಞರೂ, ಕಾರ್ಮಿಕ ಸಂಘಗಳೂ, ಕೈಗಾರಿಕಾ ಸಂಸ್ಥೆಗಳೂ ಪ್ರಬಲವಾಗಿ ಪ್ರಶ್ನಿಸಿವೆ. ಇತ್ತೀಚೆಗೆ ನಡೆದ ಜನತಾ ಪಕ್ಷದ ಸಂಸತ್ ಸದಸ್ಯರ ಸಭೆಯಲ್ಲಿ ಶ್ರೀ ಕನ್ವರ್‌ಲಾಲ್ ಗುಪ್ತರ ಹೇಳಿಕೆಯಂತೆ, ದೆಹಲಿಯಲ್ಲಿ ವರೇ ನಡೆಸಿದ ಒಂದು ಅಧ್ಯಯನದಂತೆ, ಮುಂಗಡಪತ್ರ ಪ್ರಕಟಣೆಯಾದ ಒಂದುವಾರದೊಳಗಾಗಿ ಆವಶ್ಯಕ ವಸ್ತುಗಳ ಬೆಲೆಗಳು ಶೇ. 7 ರಿಂದ ಶೇ. 25 ರಷ್ಟು ಹೆಚ್ಚಿರುವುದು. ಉಕ್ಕು, ಸಿಮೆಂಟ್, ಪೇಪರ್, ಸೀಮೆ ಎಣ್ಣೆ, ಡೀಸೆಲ್ ಇತ್ಯಾದಿಗಳು ಮಾರುಕಟ್ಟೆಯಿಂದ ಕಣ್ಮರೆಯಾಗಿದ್ದು, ಬೆಲೆಗಳು ವಿಪರೀತವಾಗಿ ಏರುತ್ತಿವೆ.

ಬೆಲೆನಿಯಂತ್ರಣ ಮಾಡಲಾಗಿದೆ ಎಂದು ಜನತಾ ಸರಕಾರವು 1978-79 ರ ಆರ್ಥಿಕ ಸಮೀಕ್ಷೆಯಲ್ಲಿ ಹೇಳಿಕೊಂಡಿರುವುದು ಸತ್ಯಕ್ಕೆ ದೂರ. 1977-78 ರ ಬೆಲೆಗಳ ಮಟ್ಟವು 1975-76 ರ ಅತ್ಯುಚ್ಚ ಮಟ್ಟದ ಬೆಲೆಗಳಿಗಿಂತಲೂ ಶೇ. 3 ರಷ್ಟು ಹೆಚ್ಚಿದೆ. 1978-79 ರಲ್ಲಿ ಬೆಲೆಗಳು ಏರುತ್ತಲೇ ಇವೆ. ಬೆಲೆ ಸೂಚ್ಯಾಂಕಗಳಲ್ಲಿ ಸಾಕಷ್ಟು ತಪ್ಪುಗಳಿದ್ದೂ, ಕಳೆದ ವರುಷದ ಮೊದಲ ಒಂಭತ್ತು ತಿಂಗಳಲ್ಲಿಯೇ ಬೆಲೆಗಳ ಮಟ್ಟವು ಶೇ. 4.4 ರಷ್ಟು ಹೆಚ್ಚಿವೆ. 1977-78 ರಲ್ಲಿ ದೇಶದ ಒಟ್ಟು ಹಣ ಸಂಚಾರವು ರೂ. 1281 ಕೋಟಿಯಷ್ಟು-ಶೇ.8 ರಷ್ಟು ಹೆಚ್ಚಿದೆಯಾದರೆ, 1978-79 ರಲ್ಲಿ ರೂ. 2739 ಕೋಟಿಯಷ್ಟು- ಶೇ. 14.9 ರಷ್ಟು ಹೆಚ್ಚಿದೆ. ಪ್ರಸಕ್ತ ವರುಷದಲ್ಲಿನ ಕೊರತೆಹಣ ಸೃಷ್ಟಿಯಿಂದಾಗಿ, ದೇಶದ ಒಟ್ಟು ಹಣಸಂಚಾರವು ಶೇ. 20ರಷ್ಟು ಹೆಚ್ಚಾಗಿ, ಬೆಲೆಗಳು ಇನ್ನಷ್ಟೂ ಹೆಚ್ಚುವುವು. ರಾಷ್ಟ್ರೀಯ ಆದಾಯಕ್ಕಿಂತಲೂ ರಾಷ್ಟ್ರೀಯ ಹಣಸಂಚಾರವು ಹೆಚ್ಚಿರುವುದು ಇದು ಮೂರನೇಯ ವರುಷವಾಗಿದ್ದು ಆರ್ಥಿಕ ರಂಗದಲ್ಲಿ ತೀವ್ರ ಹಣದುಬ್ಬರಕ್ಕೆ ಕಾರಣವಾಗಿದೆ.

ಇದೇ ಸಂದರ್ಭದಲ್ಲಿ ಬಂಡವಾಳಗಾರರ, ಮುಖ್ಯವಾಗಿ ಗುತ್ತೇದಾರಿ ಬಂಡವಾಳಗಾರರ ಆಸ್ತಿ, ವ್ಯವಹಾರ, ಮತ್ತು ಲಾಭ 1972-76ರ ಅವಧಿಯಲ್ಲಿ ಶೇ. 40 ರಿಂದ ಶೇ. 60 ರಷ್ಟು ಹೆಚ್ಚಿದೆ, ಮುಂದಿನ ವರುಷಗಳಲ್ಲಿಯೂ ಹೆಚ್ಚುತ್ತಾ ಬಂದಿದೆ. ಆದರೆ, ಕಂಪೆನಿ ತೆರಿಗೆ, ಆದಾಯ ತೆರಿಗೆ, ಮತ್ತಿತರ ಪ್ರತ್ಯಕ್ಷ ತೆರಿಗೆಗಳ ಸಂಗ್ರಹವು ಇಡುವೆಯಾಗುತ್ತಿದೆ. ಆದಾಯ ತೆರಿಗೆಯ ಅತ್ಯಧಿಕ ದರವನ್ನು 1974-75 ರಲ್ಲಿ ಶೇ. 97.75 ರಿಂದ ಶೇ. 77ಕ್ಕೆ ಇಳಿಸಲಾಯಿತು; 1976-77 ರಲ್ಲಿ ಶೇ. 66 ಕ್ಕೆ ಇಳಿಸಲಾಯಿತು. ಈ ವರುಷ ಶೇ. 5 ರಷ್ಟು ಸರ್‌ಚಾರ್ಜ್ ಹೆಚ್ಚಿಸಿ ಆದಾಯ ತೆರಿಗೆಯ ಅತ್ಯಧಿಕ ದರವನ್ನು ಶೇ. 69 ರಿಂದ ಶೇ. 72 ಕ್ಕೆ ಸಾಂಕೇತಿಕವಾಗಿ ಏರಿಸಲಾಗಿದೆ, ಅಷ್ಟೆ. ಸಂಪತ್ತು ತೆರಿಗೆಯನ್ನೂ ಸಾಂಕೇತಿಕವಾಗಿ ಏರಿಸಲಾಗಿದೆ. ಪರಿಣಾಮವಾಗಿ, ತೆರಿಗೆ ತಪ್ಪಿಸುವುದು, ತೆರಿಗೆ ಬಾಕಿ, ಕಪ್ಪುಹಣ ಚಲಾವಣೆಗಳು ಹೆಚ್ಚುತ್ತಿವೆ. ಖಾಸಗೀ ಕೈಗಾರಿಕಾ ಕ್ಷೇತ್ರದ ಲಾಭಗಳಿಕೆಯನ್ನು ಕಾಪಾಡಲು, ಸಾರ್ವಜನಿಕ ಕ್ಷೇತ್ರದ ಆವಶ್ಯಕ ವಸ್ತುಗಳನ್ನು ಹಾಗೂ ಸೇವೆಗಳನ್ನು ಸುಲಭದರದಲ್ಲಿ ಒದಗಿಸಿಕೊಡಲಾಗುತ್ತಿದೆ. ಪರಿಣಾಮವಾಗಿ, ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳು ಭಾರೀ ನಷ್ಟ ಅನುಭವಿಸುತ್ತಿವೆ. 1978-79ರಲ್ಲಿ ಕೇಂದ್ರ ಸರಕಾರವು ಈ ನಷ್ಟವನ್ನು ಭರತಿ ಮಾಡಿಕೊಡಲು ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳಿಗೆ ರೂ. 409 ಕೋಟಿಯಷ್ಟು ಸಹಾಯಧನ ನೀಡಿದೆ. ಪ್ರಸಕ್ತ ವರುಷದಲ್ಲಿಯೂ ಸಹಾಯಧನ ನೀಡುವುದು ಮುಂದುವರಿಯುವುದು.

ಆದರೆ, ರಾಷ್ಟ್ರೀಯ ಉತ್ಪನ್ನ ಸ್ಥಗಿತಗೊಂಡಿದೆ. ನಿರುದ್ಯೋಗ ಮತ್ತು ಬಡತನ ಹೆಚ್ಚಿದೆ. 1963-64ರಿಂದ 1974-75ರ ಅವಧಿಯಲ್ಲಿ ಭಾರೀ ಹಣದುಬ್ಬರದಿಂದಾಗಿ, ಕೃಷಿಕೂಲಿಗಾರರ ನಿಜವಾದ ಗಳಿಕೆಯು (real earnings) ಶೇ. 20-25 ರಷ್ಟು ಕಡಿಮೆಯಾಗಿದ್ದು, ಕಾರ್ಖಾನೆಗಳಲ್ಲಿನ ಕಾರ್ಮಿಕರ ನಿಜವಾದ ಗಳಿಕೆಯು ಶೇ. 4.5 ರಷ್ಟು ಕಡಿಮೆಯಾಗಿದೆ. ಕೈಗಾರಿಕಾ ಉತ್ಪಾದನೆಯ ಅಧಿಕಮೌಲ್ಯ (surplus value) ಸೃಷ್ಟಿಯಲ್ಲಿ ಕಾರ್ಮಿಕರ ಸಂಬಳ-ಕೂಲಿಯ ಅಂಶವು 1950ರ ದಶಕದಿಂದ 1970ರ ದಶಕದ ಅವಧಿಯಲ್ಲಿ ಶೇ. 63.4ರಿಂದ ಶೇ. 53.2 ಕ್ಕೆ ಇಳಿದಿದೆ. ಇತ್ತೀಚಿಗಿನ ಹಣದುಬ್ಬರ ಪ್ರಾರಂಭವಾಗುವ ಮೊದಲೇ, 1968-69 ರಲ್ಲಿ ದೇಶದ ಶೇ. 20ರಷ್ಟು ಅತ್ಯಂತ ಬಡಜನರು ದೇಶದ ಒಟ್ಟು ಜೀವನಾವಶ್ಯಕ ವೆಚ್ಚದಲ್ಲಿ ನಗರಗಳಲ್ಲಿ ಶೇ. 6.89 ಮತ್ತು ಹಳ್ಳಿಗಳಲ್ಲಿ ಶೇ. 8.08 ರಷ್ಟು ಪಾಲು ಪಡೆದಿರುವುದಾದರೆ, ಶೇ. 20 ರಷ್ಟು ಅತ್ಯಂತ ಶ್ರೀಮಂತ ಜನರ ಪಾಲು ನಗರಗಳಲ್ಲಿ ಶೇ. 42.11 ಮತ್ತು ಹಳ್ಳಿಗಳಲ್ಲಿ ಶೇ. 38.85ರಷ್ಟಾಗಿತ್ತು. ಅಂದಿನಿಂದ ಇನ್ನಷ್ಟು ಬೆಲೆ ಏರಿಕೆ ಮತ್ತು ಹಣದುಬ್ಬರಗಳಿಂದಾಗಿ ಈ ಅಸಮಾನತೆಯು ಗಣನೀಯವಾಗಿ ಹೆಚ್ಚಿರುವುದನ್ನು ಗಮನಿಸಬಹುದು. ಮುಂಗಡ ಪತ್ರದಲ್ಲಿ ಇಂತಹ ಮೂಲಭೂತ ಸಮಸ್ಯೆಗಳನ್ನು ಹೋಗಲಾಡಿಸಲು ಯಾವ ಸೂಚನೆಗಳೂ ಇಲ್ಲ.

ಇಂತಹ ಜನವಿರೋಧಿ ಮುಂಗಡ ಪತ್ರವನ್ನು ಗ್ರಾಮೀಣ ಹಾಗೂ ಪೇಟೆ ಪಟ್ಟಣಗಳಲ್ಲಿನ ಬಡಜನರು ಮತ್ತು ಮಧ್ಯಮವರ್ಗದವರು ಒಗ್ಗಟ್ಟಿನಿಂದ ಪ್ರತಿಭಟಿಸಬೇಕು. ಪ್ರಬಲವಾದ ಪ್ರಜಾಸತ್ತಾತ್ಮಕ ಹೋರಾಟ ನಡೆಸಬೇಕು. ನಿಜವಾದ ವೈರುಧ್ಯವು ಗ್ರಾಮೀಣ ಮತ್ತು ನಗರವಾಸಿಗಳಿಗಾಗಲೀ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರೊಳಗಾಗಲೀ ಇಲ್ಲವೆಂದೂ, ಅದು ದೇಶಾದ್ಯಂತ ಬಡವ-ಶ್ರೀಮಂತರೊಳಗಿರುವ, ಶೋಷಿತ-ಶೋಷಕರೊಳಗಿರುವ ವರ್ಗ ವೈರುಧ್ಯವೆಂದೂ ಜನತೆಗೆ ತಿಳಿಯಪಡಿಸಬೇಕು. ಕೃಷಿ, ಕೈಗಾರಿಕೆಗಳಲ್ಲಿನ ಉತ್ಪಾದನಾ ಸಂಬಂಧಗಳಲ್ಲಿ ಮೂಲಭೂತ ಬದಲಾವಣೆಗಳಿಗಾಗಿ ಹೋರಾಡಬೇಕು. ಉದ್ಯೋಗದ ಹಕ್ಕು ಪ್ರತಿಯೊಬ್ಬರಿಗೂ ಮೂಲಭೂತ ಹಕ್ಕು ಎಂದು ಪರಿಗಣಿಸಲು ಒತ್ತಾಯಿಸಬೇಕು. ಬಂಡವಾಳಶಾಹಿ ಆರ್ಥಿಕ ಅಭಿವೃದ್ಧಿಯ ಭಾರವು ಬಡಜನತೆಯ ಮೇಲೆ ಬೀಳದಂತೆ ಸಂಘಟಿತ ಹೋರಾಟ ನಡೆಸಬೇಕು. ಭೂಮಾಲೀಕರ, ಬಂಡವಾಳಶಾಹಿಗಳ ಮತ್ತು ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಡಲು ಕೃಷಿಕೂಲಿಗಾರರ ಬಡರೈತರ ಮತ್ತು ಕೈಗಾರಿಕಾ ಕಾರ್ಮಿಕರ ಹಾಗೂ ನೌಕರರ ಒಗ್ಗಟ್ಟನ್ನು ಬಲಪಡಿಸಬೇಕು. ●

ಮಾರ್ಕ್ಸ್‌ವಾದ-ಲೆನಿನ್‌ವಾದದಿಂದ ದೂರ ಸರಿದಿದ್ದರ ಪರಿಣಾಮ

[5ನೇ ಪುಟದಿಂದ]

ಮತ್ತೊಮ್ಮೆ ಒತ್ತಾಯಿಸುತ್ತೇವೆ. ಕಲಹಪರ ಹೇಳಿಕೆಗಳನ್ನು ಕೊಡುವುದನ್ನು ನಿಲ್ಲಿಸುವುದು, ಯುದ್ಧವನ್ನು ತಕ್ಷಣ ನಿಲ್ಲಿಸುವುದು, ಚಾರಿತ್ರಿಕವಾಗಿ ಸಿದ್ಧವಾಗಿರುವ ಗಡಿಗಳನ್ನು ಪರಸ್ಪರ ಒಪ್ಪಿಕೊಳ್ಳಲು ಅನುವಾಗುವಂತೆ, ಯಾವುದೇ ಕರಾರಿಲ್ಲದೆ ಚೀನಿ ಸೈನ್ಯಗಳನ್ನು ಹಿಂದಕ್ಕೆ ಕರೆಸಿಕೊಳ್ಳುವುದು, ಸೋವಿಯತ್ ದೇಶವನ್ನು ವಿರೋಧಿಸುವ ಸಲುವಾಗಿ ಅಮೆರಿಕಾ ಮತ್ತಿತರ ಸಾಮ್ರಾಜ್ಯಶಾಹಿ ಶಕ್ತಿಗಳೊಡನೆ ಸೇರುವುದನ್ನು ನಿಲ್ಲಿಸುವುದು- ಇಷ್ಟು ಕೆಲಸಗಳನ್ನು ಮಾಡಿದಾಗ ಮಾತ್ರ ಚೀನದ ಕಮ್ಯುನಿಸ್ಟ್ ನಾಯಕರು ಗಟ್ಟಿಯಾದ ನೆಲೆಯ ಮೇಲೆ ನಿಂತು "ದುಷ್ಟಗುಂಪಿ"ನವರು ನಡೆಸಿದ ಕಾರ್ಯಗಳನ್ನು ಸಂಪೂರ್ಣವಾಗಿ ಕೊಡವಿ ಅದರ ಕುರುಹು ಇಲ್ಲದ ಹಾಗೆ ಮಾಡಬಲ್ಲರು. ಇದಕ್ಕೆ ಸಂಬಂಧಿಸಿದ ಹಾಗೆ ಇನ್ನೂ ಅನೇಕ ಪ್ರಶ್ನೆಗಳು ಇವೆ. ಅವುಗಳನ್ನು ಮುಂದೆ ಪರಿಶೀಲಿಸಲಾಗುವುದು. —

ರೈತರ ಸಭೆ

ದ.ಕ. ಜಿಲ್ಲೆ ಬಂಟ್ವಾಳ ತಾಲ್ಲೂಕು ಕರಿಯಂಗಳ ಗ್ರಾಮದ ರೈತರ ಮತ್ತು ಕೃಷಿಕೂಲಿಗಾರರ ಸಭೆಯು 24-3-79ರಂದು, ನಾರಾಯಣ ಅವರ ಅಧ್ಯಕ್ಷತೆಯಲ್ಲಿ ಸೇರಿತ್ತು. ದ.ಕ. ಜಿಲ್ಲಾ ರೈತಸಂಘದ ಕಾರ್ಯದರ್ಶಿಯವರಾದ ಯು.ಜನಾರ್ಧನ ನಾಯಕ್ ಅವರು ಸಂಘಟನೆಯ ಆವಶ್ಯಕತೆಯನ್ನು ವಿವರಿಸಿ, ಭೂಸುಧಾರಣೆಯ ನೆಪದಲ್ಲಿ ಭೂಮಿ ಕಳೆದುಕೊಳ್ಳಬೇಕಾದ ಈ ಸಮಯದಲ್ಲಿ ಹೋರಾಟದ ಅಗತ್ಯತೆಯನ್ನು ಹೇಳಿದರು. ನಂತರ ಹದಿನೈದು ಮಂದಿ ಸದಸ್ಯರ ಸಮಿತಿಯನ್ನು ರಚಿಸಲಾಯಿತು. —

ಕನಿಷ್ಟ ವೇತನ ಸಲಹಾ ಸಮಿತಿಗೆ ಕಾಂ. ಎಸ್. ಸೂರ್ಯನಾರಾಯಣ ರಾವ್

ಕರ್ನಾಟಕ ರಾಜ್ಯ ಸರ್ಕಾರವು ಕನಿಷ್ಟ ವೇತನ ಸಲಹಾ ಸಮಿತಿಯನ್ನು ಪುನರ್‌ರಚನೆ ಮಾಡಿದೆ. ಹೊಸ ಸಮಿತಿಯಲ್ಲಿ ಸಿ.ಐ.ಟಿ.ಯು. ಪರವಾಗಿ ರಾಜ್ಯ ಸಿ.ಐ.ಟಿ.ಯು. ಅಧ್ಯಕ್ಷರಾದ ಕಾಂ. ಎಸ್. ಸೂರ್ಯನಾರಾಯಣ ರಾವ್‌ರವರನ್ನು ಕಾರ್ಮಿಕರಪರ ಸದಸ್ಯರೆಂದು ನಾಮಕರಣ ಮಾಡಲಾಗಿದೆ. ಸಿ. ಐ. ಟಿ. ಯು. ಸಂಘಟನೆಯನ್ನು ಮಾನ್ಯಮಾಡಿ ಪ್ರತಿನಿಧಿಯೊಬ್ಬರನ್ನು ಈ ಸಲಹಾ ಸಮಿತಿಗೆ ಸೇರಿಸಿರುವುದು ಇದೇ ಮೊದಲ ಸಾರಿ. ಸಿ.ಐ.ಟಿ.ಯು.ಗೆ ದೊರೆತ ಪ್ರಾತಿನಿಧ್ಯ ಇಡೀ ಕಾರ್ಮಿಕವರ್ಗದ ವಿಜಯವಾಗಿದೆ. □

ದ್ರಾಕ್ಷಿ ಬೆಳೆಗಾರರ ಮಾರಾಟ ಸಂಘದ ಕಾರ್ಮಿಕರ ಹೋರಾಟ

ಬೆಂಗಳೂರು ದ್ರಾಕ್ಷಿ ಬೆಳೆಗಾರರ ಮಾರಾಟ ಸಹಕಾರಸಂಘದ ಮೈಸೂರು ಶಾಖೆಯ ಕೆಲಸಗಾರರು ಮೈಸೂರು ಜಿಲ್ಲಾ ಜನರಲ್ ಎಂಪ್ಲಾಯೀಸ್ ಯೂನಿಯನ್ನಿನ ಆಶ್ರಯದಲ್ಲಿ ಹಲವಾರು ವರ್ಷಗಳಿಂದ ಹೋರಾಟ ನಡೆಸುತ್ತಿದ್ದಾರೆ. ಕಾರ್ಮಿಕರ ಬೋನಸ್, ಸಂಬಳ, ಖಾಯಂಗೊಳಿಸುವಿಕೆ ಇತ್ಯಾದಿ ಬೇಡಿಕೆಗಳ ಬಗ್ಗೆ ಕಾರ್ಮಿಕ ಇಲಾಖೆಯಲ್ಲಿ ಸಂಧಾನ ನಡೆದು ಯಾವ ತೀರ್ಮಾನವೂ ಆಗದೆ, ಕಾರ್ಮಿಕರು ತೀವ್ರ ಹೋರಾಟಕ್ಕೆ ಸಿದ್ಧರಾಗುತ್ತಿದ್ದಾರೆ.

ಈ ಹೋರಾಟಕ್ಕೆ ಸಂಬಂಧಿಸಿ ಸೊಸೈಟಿಯ ಒಬ್ಬ ಕೆಲಸಗಾರನನ್ನು ವಿನಾಕಾರಣ ಆರೋಪ ಹೊರಿಸಿ ಕೆಲಸದಿಂದ ತೆಗೆದುಹಾಕಲಾಯಿತು. ಇದರ ವಿರುದ್ಧ ಮುಷ್ಕರ ಪ್ರಾರಂಭವಾಯಿತು. ತೀವ್ರ ಹೋರಾಟದ ನಂತರ ಮುಷ್ಕರಕ್ಕೆ ಗೆಲುವು ದೊರೆತು ವಜಾ ಆಗಿದ್ದ ಕಾರ್ಮಿಕನನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಲಾಯಿತು.

ರಾಜ್ಯ ಸಮಿತಿ ಸೆಕ್ರೆಟೇರಿಯಟ್ ವಿಸ್ತರಣೆ

ಮಾರ್ಚ್ 23 ಮತ್ತು 24 ರಂದು ಸೇರಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿಯ ಸಭೆಯಲ್ಲಿ ಕಾಂ. ಎಸ್. ಸೂರ್ಯನಾರಾಯಣ ರಾವ್ ಅವರನ್ನು ರಾಜ್ಯ ಸಮಿತಿಯ ಸೆಕ್ರೆಟೇರಿಯಟ್‌ಗೆ ಸದಸ್ಯರನ್ನಾಗಿ ಸೇರಿಸಿಕೊಳ್ಳುವ ತೀರ್ಮಾನ ಮಾಡಲಾಗಿದೆ. ಇದರಿಂದಾಗಿ ರಾಜ್ಯಸಮಿತಿಯ ಸೆಕ್ರೆಟೇರಿಯಟ್‌ನಲ್ಲಿ ಆರು ಮಂದಿ ಸದಸ್ಯರಿರುವರು.

ಕುಡಿಯುವ ನೀರಿಗಾಗಿ ಒತ್ತಾಯ, ಖಾಲಿ ಬಿಂದಿಗೆಗಳ ಪ್ರದರ್ಶನ

ಕೋಲಾರ ಜಿಲ್ಲೆ ಶಿಡ್ಲಘಟ್ಟದಲ್ಲಿ ಕುಡಿಯುವ ನೀರಿನ ಸರಬರಾಜು ನಿಂತಿದ್ದು ಅಲ್ಲಿನ ನಾಗರೀಕರಿಗೆ ಕುಡಿಯುವ ನೀರಿಗೂ ಬರಬಂದಿದೆ.

ತಮಗೆ ಕುಡಿಯುವ ನೀರನ್ನು ಒದಗಿಸಿಕೊಡಬೇಕೆಂದು ಶಿಡ್ಲಘಟ್ಟದ ನಾಗರೀಕರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಆಶ್ರಯದಲ್ಲಿ ಮಾರ್ಚ್ 24 ರಂದು ಇಲ್ಲಿನ ಪುರಸಭೆ ಮುಂದೆ ಖಾಲಿ ಬಿಂದಿಗೆಗಳ ಪ್ರದರ್ಶನ ಮಾಡಿದರು. ನಂತರ ಸಿ. ಪಿ. ಐ. (ಎಂ)ನ ಕೋಲಾರ ಜಿಲ್ಲಾ ಸಮಿತಿಯ ಸದಸ್ಯ ಶ್ರೀ ಎಚ್. ಎಸ್. ದೊರೆಸ್ವಾಮಿಯವರು ನಾಗರೀಕರಿಂದ ಸಹಿ ಸಂಗ್ರಹಣೆ ಮಾಡಿದ ಮನವಿಪತ್ರವನ್ನು ಪುರಸಭೆಯ ಅಧಿಕಾರಿಗಳಿಗೆ ಅರ್ಪಿಸಿ ಕುಡಿಯುವ ನೀರಿನ ಸರಬರಾಜಿಗೆ ಒತ್ತಾಯಮಾಡಿದರು. ಮನವಿಪತ್ರ ಸ್ವೀಕರಿಸಿದ ಅಧಿಕಾರಿಗಳು ಶೀಘ್ರದಲ್ಲಿಯೇ ಸೂಕ್ತಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರೆಂದು ದೊರೆಸ್ವಾಮಿಯವರು ತಿಳಿಸಿದ್ದಾರೆ. □

ಜಪ್ಪಿನಮೊಗ್ರು ಯುವಕ ಮಂಡಲ ಕಟ್ಟಡ ಉದ್ಘಾಟನೆ

ದ.ಕ.ಜಿಲ್ಲೆ ಮಂಗಳೂರು ತಾಲ್ಲೂಕು ಜಪ್ಪಿನಮೊಗ್ರು ಗ್ರಾಮದ ಯುವಕ ಮಂಡಲದ ನೂತನ ಕಟ್ಟಡದ ಉದ್ಘಾಟನೆಯು 18-3-79ನೇ ಭಾನುವಾರದಂದು ನೆರವೇರಿತು.

ಸಮಾರಂಭದ ಅಂಗವಾಗಿ ಮಂಡಲದ ಸದಸ್ಯರು "ನೆತ್ತೆರ್‌ದ ಕಾಣಿಕೆ" ಎಂಬ ತುಳು ನಾಟಕವನ್ನು ಅಭಿನಯಿಸಿದರು. ()

ಶಿರಸಿಯಲ್ಲಿ ರೈತರ ಸಭೆ

ರೈತರಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಚರ್ಚಿಸಿ ಅವುಗಳಿಗೆ ಪರಿಹಾರ ಕಂಡುಕೊಳ್ಳಲು ರೈತಪ್ರತಿನಿಧಿಗಳ ಸಭೆಯೊಂದನ್ನು ಏಪ್ರಿಲ್ 16 ರಂದು 3 ಗಂಟೆಗೆ ಶಿರಸಿ ಅರ್ಬನ್ ಬ್ಯಾಂಕ್‌ನಲ್ಲಿ ಕರೆಯಲಾಗಿದೆ ಎಂದು ಶಿರಸಿಯ ವಕೀಲರೂ ಮತ್ತು ರೈತ ಮುಖಂಡರುಗಳೂ ಆದ ಎಂ. ಎಸ್. ಧಾರೇಶ್ವರ್ ಹಾಗೂ ರಮೇಶ್‌ಚೌಧರಿ ತಿಳಿಸಿದ್ದಾರೆ.

ಈ ಪ್ರದೇಶದ ರೈತರು ಮತ್ತು ರೈತರ ಹಿತಾಸಕ್ತಿಗಳಲ್ಲಿ ಆಸಕ್ತರು ಬಂದು ಸಭೆಯನ್ನು ಯಶಸ್ವಿ ಮಾಡಬೇಕೆಂದು ಅವರು ಕೋರಿದ್ದಾರೆ. —

ಉಡುಪಿಯಲ್ಲಿ ತೆರಿಗೆಗೆ ಪ್ರತಿಭಟನೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಉಡುಪಿ ತಾಲ್ಲೂಕು ಸಮಿತಿಯ ಆಶ್ರಯದಲ್ಲಿ 26-3-79ರಂದು ಉಡುಪಿಯಲ್ಲಿ ಸಾರ್ವಜನಿಕ ಸಭೆಯು ಸೇರಿತ್ತು.

ಸರ್ಕಾರದ ತೆರಿಗೆ ನೀತಿಯನ್ನು ಖಂಡಿಸಿ, ಸೀಮೆ ಎಣ್ಣೆ ಮುಂತಾದ ವಸ್ತುಗಳನ್ನು ಒದಗಿಸುವಂತೆ ಸರ್ಕಾರವನ್ನು ಒತ್ತಾಯಿಸಲಾಯಿತು. ಸರ್ಕಾರವು ರಾಜ್ಯ ಸರ್ಕಾರಿ ನೌಕರರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಬೇಕೆಂದು ವಿನಂತಿಸಲಾಯಿತು. ಉಡುಪಿಯಲ್ಲಿ ಸರದಿ ಸತ್ಯಾಗ್ರಹ ಮಾಡುತ್ತಿರುವ ರಾಜ್ಯ ಸರ್ಕಾರಿ ನೌಕರರಿಗೆ ಸಭೆಯು ಬೆಂಬಲ ವ್ಯಕ್ತಪಡಿಸಿತು. ●

ಸಾಮಿಲ್ ಮತ್ತು ಜನರಲ್ ವರ್ಕರ್ಸ್ ಸಭೆ

[2ನೇ ಪುಟದಿಂದ]

ಡೀಸೆಲ್ ಮೊದಲಾದ ಅಗತ್ಯವಸ್ತುಗಳ ಮೇಲೆ ವಿಧಿಸಿರುವ ತೆರಿಗೆಗಳು, ಹೊರಿಸಿರುವ ಸುಂಕಗಳು, ವಿಪರೀತ ಬೆಲೆಯೇರಿಕೆಯನ್ನುಂಟುಮಾಡಿ ಜನತೆಯನ್ನು ದುರ್ಭರ ಸಂಕಷ್ಟಕ್ಕೆ ಈಡುಮಾಡಿರುವುದನ್ನು ಖಂಡಿಸುವ ನಿರ್ಣಯವನ್ನು ಈ ಸಭೆಯಲ್ಲಿ ಕೈಗೊಳ್ಳಲಾಯಿತು.

ಸರ್ಕಾರವು ಅಕ್ಟ್ರಾಯಿಯನ್ನು ರದ್ದುಮಾಡಿರುವುದರಿಂದ ಪುರಸಭೆ ಮತ್ತು ನಗರಸಭೆಗಳಲ್ಲಿ ಕೆಲಸವಿಲ್ಲದೆ ಹೋಗುವ ನೌಕರರಿಗೆ ಕೂಡಲೇ ಬದಲಿ ನೌಕರಿಯನ್ನು ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಈ ಸಭೆಯು ರಾಜ್ಯ ಸರಕಾರವನ್ನು ಒತ್ತಾಯಿಸಿತು.

ಕೊಡಗು ಜಿಲ್ಲೆಯ ತಿತಿಮತಿ, ಆನೆಚೌಕೂರು, ಮಲ್ಲಿಪಟ್ಟಣ, ಮತ್ತಿಗೋಡು ಮತ್ತು ಕಾಂತಾಪುರ ಮೊದಲಾದ ಗ್ರಾಮಗಳಲ್ಲಿ ಅನೇಕ ವರ್ಷಗಳಿಂದ ವಾಸವಿದ್ದ ರೈತರನ್ನು (ಅಭಯಾರಣ್ಯ ಮಾಡುವ ಉದ್ದೇಶದಿಂದ) ಅರಣ್ಯ ಇಲಾಖೆಯವರು ಒಕ್ಕಲೆಬ್ಬಿಸುತ್ತಿರುವುದನ್ನು ಈ ಸಭೆಯು ಖಂಡಿಸಿ ಇದನ್ನು ಪ್ರತಿಭಟಿಸಲು ಅಲ್ಲಿನ ರೈತರು ನಡೆಸುತ್ತಿರುವ ಚಳುವಳಿಗೆ ಬೆಂಬಲ ಕೊಡುವ ನಿರ್ಣಯವನ್ನು ಅಂಗೀಕರಿಸಿತು.

ಇದೇ ಏಪ್ರಿಲ್ 9 ಮತ್ತು 10 ರಂದು ಮದ್ರಾಸಿನಲ್ಲಿ ನಡೆಯುವ ದುಡಿಯುವ ಮಹಿಳೆಯರ ರಾಷ್ಟ್ರೀಯ ಸಮಾವೇಶಕ್ಕೆ ಸಭೆಯು ಪ್ರತಿನಿಧಿಗಳನ್ನು ಆರಿಸಿತು. ಏಪ್ರಿಲ್ 11 ರಿಂದ 15ರ ವರೆಗೆ ಮದ್ರಾಸಿನಲ್ಲಿ ನಡೆಯುವ ಸಿ.ಐ.ಟಿ.ಯು. ವಿನ 4ನೆಯ ಅಖಿಲ ಭಾರತ ಸಮಾವೇಶಕ್ಕೆ ಸಂಘದ ಪ್ರತಿನಿಧಿಗಳಾಗಿ ಕಾಂ. ಎ. ಕೆ. ವಿಶ್ವನಾಥ್, ಕಾಂ. ಪಾಲ್‌ಯ್ಯೂಜಿನ್ ಡಿಸೋಜ, ಕಾಂ. ಚಂಪಾ ಇವರುಗಳನ್ನು ಸಭೆಯು ಸರ್ವಾನುಮತದಿಂದ ಚುನಾಯಿಸಿತು. ಇನ್ನೊಬ್ಬ ಪ್ರತಿನಿಧಿಯನ್ನು ಆರಿಸುವ ಅಧಿಕಾರವನ್ನು ಕಾರ್ಯದರ್ಶಿಯವರಿಗೆ ನೀಡಲಾಯಿತು. ಸಿ.ಐ.ಟಿ.ಯು. ಸಮ್ಮೇಳನದಲ್ಲಿ ಭಾಗವಹಿಸುವ ಮಹಿಳಾ ಪ್ರತಿನಿಧಿಗಳೆಲ್ಲರೂ ದುಡಿಯುವ ಮಹಿಳೆಯರ ಸಮ್ಮೇಳನದಲ್ಲೂ ಭಾಗವಹಿಸುವುದೆಂದು ತೀರ್ಮಾನಿಸಲಾಯಿತು. ●

ಬನಶಂಕರಿಯಲ್ಲಿ ಪೋಲೀಸ್ ದಬ್ಬಾಳಿಕೆ

ಎಂಟು ಮಂದಿಯ ಬಂಧನ

ಬನಶಂಕರಿಯಲ್ಲಿ ಮಾರ್ಚ್ 17 ರಂದು ಸುಮಾರು 500 ಗುಡಿಸಲುಗಳನ್ನು ನಿರ್ನಾಮಮಾಡಿದ ಸರ್ಕಾರದ ದಬ್ಬಾಳಿಕೆಯ ವರದಿ 'ಐಕ್ಯರಂಗ'ದಲ್ಲಿ ಏಪ್ರಿಲ್ ಒಂದರಂದು ಪ್ರಕಟಿಸಲಾಗಿತ್ತಷ್ಟೆ.

ದಿನಾಂಕ 3-4-79ರ ಬೆಳಿಗ್ಗೆ ನಾಲ್ಕು ವ್ಯಾನುಗಳಲ್ಲಿ ಪೋಲೀಸರು ಬಂದು ಇದ್ದಕ್ಕಿದ್ದ ಹಾಗೆ ಮುತ್ತಿಗೆ ಹಾಕಿ, ಹೆಂಗಸರು ಮಕ್ಕಳನ್ನು ಹೊರಗೆಳೆದು ಹಾಕಿ, ಎರಡು ಮೂರು ಗುಡಿಸಲುಗಳಿಗೆ ಬೆಂಕಿಯಿಟ್ಟರು. ನಿರ್ಧಯಿ ಪೋಲೀಸನೊಬ್ಬ ಒಂದು ಮಗುವನ್ನು ಚೆಂಡೆಸೆಯುವಂತೆ ಎಸೆದ. ಒಂದು ವಾರದ ಹಿಂದೆ ಎಂ. ಎಲ್. ಸಿ. ಗಳ ಏಜೆಂಟೊಬ್ಬಳು ಒಂದು ಮಗುವನ್ನು ನೆಲಕ್ಕೆ ಕುಕ್ಕಿದ್ದಳು, ಅದು ಮಾರನೆಯ ದಿನವೇ ಅಸುನೀಗಿತ್ತು.

ಆ ಮಗು ಸತ್ತ ದಿನ ಕೆಲವು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ಸ್ಥಳಕ್ಕೆ ದಾವಿಸುವುದರಲ್ಲಿ ಎಷ್ಟೋ ಬಡಪಾಯಿಗಳು ಪ್ರಾಣಭಯದಿಂದ ಸ್ಥಳ ಬಿಟ್ಟು ಹೋಗಿದ್ದರು. ಕಾರ್ಯಕರ್ತರು ಅಲ್ಲಿಯೇ ಬಿಡಾರಮಾಡಿ ಹಗಲುರಾತ್ರಿ ಕಾವಲಿದ್ದರು. ಧೈರ್ಯಗೊಂಡ ಗುಡಿಸಲು ನಿವಾಸಿಗಳನ್ನು ಪುನರ್‌ಸಂಘಟಿಸುತ್ತಿರುವಂತೆಯೇ ಈ ಕಾರ್ಯಕರ್ತರನ್ನು ಬಂಧಿಸಲಾಯಿತು. ಬಂಧಿತರಾದವರಲ್ಲಿ ಪಕ್ಷದ ಜಿಲ್ಲಾ ಸಮಿತಿಯ ಸೆಕ್ರೆಟೇರಿಯಟ್ ಸದಸ್ಯರಾದ ಕಾಂ. ಟಿ. ಎಸ್. ಅನಂತರಾಮ್‌ರವರೂ ಸೇರಿರುವರು.

ಪೋಲೀಸ್ ದಬ್ಬಾಳಿಕೆಯನ್ನು ಪ್ರತಿಭಟಿಸಿದ ಕೆಲವು ಹೆಂಗಸರಿಗೆ ವಿಪರೀತ ಹೊಡೆಯಲಾಗಿದೆ. ಹೊಡೆದವರೆ ಚಿಕಿತ್ಸೆ ನೀಡುತ್ತೇವೆಂದು ಸ್ಟೇಷನ್ನಿನಿಂದ ಕರೆದೊಯ್ದರು. ಚಿಕಿತ್ಸೆ ನೀಡುವರೋ ಮತ್ತೂ ಹೊಡೆಯುವರೋ ಹೇಳಲಾಗದು.

ಎರಡು ಮೂರು ಗುಡಿಸಲುಗಳಿಗೆ ಬೆಂಕಿಯಿಟ್ಟು ಹಿಂದಿರುಗುವರೆಂಬ ಕೊನೆಯಾಸೆಯೂ ಸುಚ್ಚುನೂರಾಗಿ, ಸಂಜೆಯೊಳಗೆ ಗುಡಿಸಲುಗಳೆಲ್ಲಾ ನೆಲಸಮವಾದುವು. ಆಸೆ, ನಿರಾಸೆ, ಭವಿಷ್ಯ, ಬಾಳು, ಎಲ್ಲವನ್ನೂ ಕಳೆದುಕೊಂಡ ಎರಡೂವರೆ ಸಾವಿರ ಅಲ್ಪಸಂಖ್ಯಾತ ಜನಸಮೂಹ ನೀರವವಾಗಿ, ತಮ್ಮ ನೆರಳು ನಾಶವಾಗುವುದನ್ನು ದೂರದ ದಡದ ಮೇಲೆ ನಿಂತು, ಬಿಸಿಲು ತಾಪದ ಅರಿವಿಲ್ಲದೆ ವೀಕ್ಷಿಸುತ್ತಿತ್ತು. ಇದರೊಂದಿಗೆ, ಸಂಘಟಿತ ಹೋರಾಟದ ಅರಿವೂ ಮೂಡುತ್ತಲಿದೆ. ●

ಬೀಡಿ ಕೆಲಸಗಾರರ ಸಭೆ

ಮಂಗಳೂರು ಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ವಾರ್ಷಿಕ ಮಹಾಸಭೆಯು 18-3-79 ರಂದು ಜರುಗಿತು. ಕಾಂ. ಕೆ. ಆರ್. ಶ್ರೀಯೊನರು ಅಧ್ಯಕ್ಷತೆ ವಹಿಸಿದ್ದರು. ವಾರ್ಷಿಕ ವರದಿಯನ್ನು ಕಾಂ. ಜೋನ್ ಸಿ. ಸಾಲಿನ್ಸ್, ಲೆಕ್ಕಪತ್ರವನ್ನು ಕಾಂ. ಸಿ. ನಾರಾಯಣನವರು ಮಂಡಿಸಿದರು.

ಮುಂದಿನ ವರ್ಷಕ್ಕೆ ಅಧ್ಯಕ್ಷರಾಗಿ ಕಾಂ. ಕೆ. ಆರ್. ಶ್ರೀಯೊನ್, ಉಪಾಧ್ಯಕ್ಷರಾಗಿ ಕಾಂ. ಕೆ. ಸದಾನಂದ, ಕಾರ್ಯದರ್ಶಿಯಾಗಿ ಕಾಂ. ಜೋನ್. ಸಿ. ಸಾಲಿನ್ಸ್, ಜತೆಕಾರ್ಯದರ್ಶಿಯಾಗಿ ಕಾಂ. ಕೆ. ಬಾಬು ದೇವಾಡಿಗ, ಕೋಶಾಧಿಕಾರಿಯಾಗಿ ಕಾಂ. ಸಿ. ನಾರಾಯಣನವರೂ ಹಾಗೂ 22 ಮಂದಿಯ ಕಾರ್ಯಕಾರಿ ಸಮಿತಿಯೂ ಆಯ್ಕೆಯಾಯಿತು.

ಸಭೆಯನ್ನುದ್ದೇಶಿಸಿ ಕಾರ್ಮಿಕರ ಮುಖಂಡ ಕಾಂ. ಪಿ. ರಾಮಚಂದ್ರ ರಾವ್ ಮತ್ತು ಕಾಂ. ಬಿ. ನಾರಾಯಣ ಮೊದಲಾದವರು ಮಾತನಾಡಿದರು. —

ವಿನಂತಿ

ಐಕ್ಯರಂಗ ಪತ್ರಿಕೆಯು ಈಗ ಸರಿಯಾದ ಸಮಯಕ್ಕೆ ಪ್ರಕಟಣೆಗೊಳ್ಳುತ್ತಿದೆ. ನಮ್ಮ ಓದುಗರು ಮತ್ತು ಏಜೆನ್ಸಿಗಳಿಗೆ ಸರಿಯಾದ ಸಮಯದಲ್ಲಿ ದೊರೆಯದಿದ್ದಲ್ಲಿ ನಮ್ಮ ಗಮನಕ್ಕೆ ತರಬೇಕಾಗಿ ಕೋರಿಕೆ.

ಸಂಪಾದಕ

೧೦ ಸಾವಿರ ಆಕ್ಟ್ರಾಯಿ ನೌಕರದಾರರು ನಿರ್ಗತಿಕರೇ?

—ಎನ್.ಕೆ. ಉಪಾಧ್ಯಾಯ

ಏಪ್ರಿಲ್ 1ರಿಂದ ನಮ್ಮ ರಾಜ್ಯದಲ್ಲಿರುವ ನಗರಸಭೆಗಳು ವಸೂಲಿ ಮಾಡುತ್ತಿದ್ದ ಆಕ್ಟ್ರಾಯಿ ಕರವನ್ನು ರದ್ದುಪಡಿಸಲಾಗುವುದೆಂದು ಅರ್ಥಿಕ ಮಂತ್ರಿ ರುದ್ರಪ್ಪಾ ಅವರು ಮಾರ್ಚ್ 19ರಂದು ವಿಧಾನಸಭೆಯಲ್ಲಿ ಘೋಷಿಸಿದರು. ಲಂಚಗುಳಿತನ-ಭ್ರಷ್ಟಾಚಾರದ ಕೊಂಪೆಯಾಗಿದ್ದ ಆಕ್ಟ್ರಾಯಿ ಪದ್ಧತಿ, ವಸ್ತುಗಳ ವಾಹತುಕಕ್ಕೆ ಅಡ್ಡಿಯಾಗಿದ್ದ ಈ ಪದ್ಧತಿ ರದ್ದಾಗಿರುವುದನ್ನು ಐಕ್ಯರಂಗ ಸ್ವಾಗತಿಸಿತ್ತು. ವ್ಯಾಪಾರಸ್ಥರೂ ಇದನ್ನು ಸ್ವಾಗತಿಸಿದ್ದಾರೆ.

ಆದರೆ ಬಂಡವಾಳಶಾಹಿ ಸರ್ಕಾರ ತಾನೊಂದು ನಿರ್ಣಯ ಕೈಕೊಂಡಾಗ, ಅದರಿಂದುಂಟಾಗುವ ಪರಿಣಾಮಗಳಿಗೆ ಯೋಗ್ಯ ಪರಿಹಾರ ಸೂಚಿಸುವುದಿಲ್ಲ. ಅದರಿಂದಾಗಿ ಹಲವರಿಗೆ ಹಾನಿ ತಟ್ಟುತ್ತದೆ.

ಸರ್ಕಾರದ ಈ ನಿರ್ಣಯ 4 ಕಾರ್ಪೊರೇಷನ್ ಮತ್ತು 256ಕ್ಕೂ ಮೇಲ್ಪಟ್ಟು ನಗರಸಭೆಗಳಿಗೆ ಸಂಬಂಧಿಸಿರುತ್ತದೆ. ಆಕ್ಟ್ರಾಯಿ ರದ್ದಾದುದರಿಂದ ಈ ನಗರಸಭೆಗಳಲ್ಲಿ ಕೆಲಸ ಮಾಡುತ್ತಿರುವ 10 ಸಾವಿರ ನೌಕರದಾರರ ಭವಿಷ್ಯವೇನು? ಈ ನಗರಸಭೆಗಳಿಗೆ ಆಕ್ಟ್ರಾಯಿಯಿಂದಾಗಿ ಪ್ರತಿ ವರ್ಷ 30ಕೋಟಿ ರೂ. ಉತ್ಪನ್ನ ಬರುತ್ತಿದ್ದು. ಇನ್ನು ಮುಂದೆ ಸರ್ಕಾರಕ್ಕೆ "ಬಿಕ್ಷಾಂದೇಹಿ" ಎಂದು ಕೈಯ್ಯೊಡ್ಡಬೇಕಾಗುತ್ತದೆ. ಆಕ್ಟ್ರಾಯಿ ತೆರಿಗೆಯಿಂದ ನಗರಸಭೆಗಳಿಗಾಗುವ ಅರ್ಥನಷ್ಟು ಹಾನಿಯನ್ನು ಕೇಂದ್ರ ಸರ್ಕಾರದಿಂದ ಪಡೆದು ತುಂಬಿಕೊಡಲಾಗುವುದೆಂದೂ, ಕೇಂದ್ರ ಸರ್ಕಾರ ಅದನ್ನು ನಿರಾಕರಿಸಿದ್ದಾದರೆ ಹೆಚ್ಚಿನ ಕರ ಹೇರಬೇಕಾದೀತೆಂಬ ಎಚ್ಚರಿಕೆಯನ್ನು ಅರ್ಥಿಕ ಮಂತ್ರಿಗಳು ಈಗಾಗಲೇ ಜಾಹಿರ ಮಾಡಿದ್ದಾರೆ. ಈ ವರ್ಷದ ಬಜೆಟ್ಟಿನಲ್ಲಿ ಹೆಚ್ಚಿನ ಸರ್ಚಾರ್ಜ್ ಹೇರಿ ನಗರಸಭೆಗಳಿಗಾಗುವ ಹಾನಿ ತುಂಬಿಕೊಡಲಾಗುವುದೆಂದೂ ಹೇಳಿದ್ದಾರೆ. ಆದರೆ 10,000 ನೌಕರದಾರರ ಗತಿಯೇನೆಂಬುದನ್ನು ತಿಳಿಸಿಲ್ಲ. ನಗರಸಭೆ ನೌಕರದಾರರ ಫೆಡರೇಷನ್ ಈಗಾಗಲೇ ಈ ಪ್ರಶ್ನೆ ಕುರಿತು ಸರಕಾರದ ಗಮನವನ್ನು ಸೆಳೆದಿದೆ. ಆದರೆ ಸರ್ಕಾರದಿಂದ ನಿರ್ದಿಷ್ಟ ಉತ್ತರ ಬಂದಿಲ್ಲ. ನಿರುದ್ಯೋಗಿಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿರುವಾಗ ಹಲವಾರು ವರ್ಷಗಳಿಂದ ದುಡಿಯುತ್ತ ಬಂದಿರುವ ಈ ನಾಕ ನೌಕರದಾರರನ್ನು ದಾರಿಪಾಲು ಮಾಡದೆ, ಬೇರೆಡೆ ಇವರ ನೌಕರಿ ಮುಂದುವರಿಸುವುದು ಅತ್ಯಗತ್ಯ. ಸರ್ಕಾರ ಇದರ ಕುರಿತು ಪೂರ್ವ ವಿಚಾರ ಮಾಡಬೇಕಿತ್ತು. ಅದನ್ನು ಮಾಡದಿರುವುದು ಘೋರ ತಪ್ಪು.

ಆಕ್ಟ್ರಾಯಿ ರದ್ಧತಿಯಿಂದ ಕೆಲವರಿಗೆ ಲಾಭವಾದರೂ ಕೂಡ, ಆ ಖಾತೆಯಲ್ಲಿ ಭ್ರಷ್ಟಾಚಾರ ಕೊನೆಗೊಂಡರೂ, ನೌಕರದಾರರ ನೌಕರಿಭದ್ರತೆ ಹಾಗೂ ನಗರಸಭೆಗಳಿಗಾಗುವ ಹಾನಿ ತುಂಬಿಕೊಡುವ ಮಹತ್ವಾದ ಪ್ರಶ್ನೆಗಳು ಪ್ರಶ್ನಾರ್ಥಕವಾಗಿಯೇ ಉಳಿದಿದೆ. ಮೊನ್ನೆ ಬೆಂಗಳೂರು ವಿಧಾನಸೌಧದಲ್ಲಿ ಒಬ್ಬ ಪ್ರಮುಖರು ಉದ್ಗಾರ ತೆಗೆದಂತೆ ಇಷ್ಟು ವರ್ಷ, ಬೋರ್ಡಿಂಗ್ ಮತ್ತು ಶಿಕ್ಷಣ ಇಲಾಖೆಯವರು (ಶಾಲೆ-ಕಾಲೇಜು) ಮಾತ್ರ ಗ್ರ್ಯಾಂಟಿನ ಸಲುವಾಗಿ ಮಂತ್ರಿಗಳ ಚೇಂಬರಿನ ಮುಂದೆ ಕ್ಯೂ ನಿಲ್ಲುತ್ತಿದ್ದರು. ಮುಂದಿನ ವರ್ಷದಿಂದ ನಗರಸಭೆಯವರ ಕ್ಯೂ ಪ್ರಾರಂಭವಾದಂತಾಯಿತು.

ಸರಕಾರದ ಗ್ರ್ಯಾಂಟು ವೇಳೆಗೆ ಸರಿಯಾಗಿ ಸಿಗದೆ ಇನ್ನು ಮುಂದೆ ನಗರಸಭೆಗಳಲ್ಲಿ ದುಡಿಯುತ್ತಿರುವ ನೌಕರದಾರರಿಗೆ ವೇಳೆಗೆ ಸರಿಯಾಗಿ ಸಂಬಳ ಸಿಗಲು ಸಾಧ್ಯವಿಲ್ಲ. ಅದರಂತೆಯೇ ಸಾರ್ವಜನಿಕ ಕೆಲಸಗಳೂ ಸ್ಥಗಿತಗೊಂಡಾವು. ಆಕ್ಟ್ರಾಯಿ ರದ್ಧತಿಯಿಂದ ನೌಕರದಾರರ ಸಮಸ್ಯೆ ಅಷ್ಟೇ ಅಲ್ಲ ಇತರ ಸಮಸ್ಯೆಗಳನ್ನೂ ಸರಕಾರ ಬಗೆಹರಿಸಬೇಕಾಗಿದೆ.

ಏಪ್ರಿಲ್ 1ರಿಂದ ಆಕ್ಟ್ರಾಯಿ ರದ್ದಾಗಿಲ್ಲ. ಸರಕಾರದಿಂದ ಆದೇಶ ಬಾರದಿರುವುದರಿಂದ ಆಕ್ಟ್ರಾಯಿ ತೆರಿಗೆ ವಸೂಲಿ ನಡೆಯುತ್ತಿದೆ. ಸರಕಾರದ ಘೋಷಣೆ ಆಕ್ಟ್ರಾಯಿ ರದ್ದಾಗಿದೆಯೆಂದು! ಆದರೆ ಅದು ಕಾರ್ಯರೂಪದಲ್ಲಿ ಬರಲಿಕ್ಕೆ ತಡವಾಗುತ್ತಿದೆ. ಇದು ಬಂಡವಾಳಶಾಹಿ ಸರಕಾರದ ನೀತಿ. ಜನತೆ ಇಂಥ ನೀತಿ ವಿರುದ್ಧ ಹೋರಾಡಬೇಕು. •

ಸಂಪಾದಕೀಯ

[1ನೇ ಪುಟದಿಂದ]

ಯದಾಗಿ, ಕಾನೂನನ್ನು ಜಾರಿಗೊಳಿಸುವುದರ ಬಗ್ಗೆ ಚಕಾರ ಶಬ್ದವಿಲ್ಲ. ಈ ಹಿಂದೆ ಇದ್ದ ಕನಿಷ್ಠವೇತನವೂ ಲಕ್ಷಾಂತರ ಮಂದಿ ಕಾರ್ಮಿಕರಿಗೆ ದೊರೆಯುತ್ತಿದ್ದಿಲ್ಲ. ಕಾನೂನನ್ನು ಜಾರಿಮಾಡದೆ ಅಸಂಘಟಿತ ಕಾರ್ಮಿಕರನ್ನು ಶೋಷಿಸುವ ಮಾಲಕರ ಮೇಲೆ ಕ್ರಮತೆಗೆದುಕೊಳ್ಳುವ ಬದಲು, ಕಾನೂನು ಜಾರಿಗಾಗಿ ಪ್ರಜಾಪ್ರಭುತ್ವ ರೀತಿಯಲ್ಲಿ ಹೋರಾಟಮಾಡಿದ ಕಾರ್ಮಿಕರ ಮೇಲೆ ಸರಕಾರ ಮತ್ತು ಮಾಲಕರ ಗದಾಪ್ರಹಾರ ನಡೆಯುತ್ತಾ ಬಂದಿದೆ. ಕಾನೂನು ಜಾರಿಮಾಡದ ಮಾಲಕರ ಮೇಲೆ ಕ್ರಮವಹಿಸುವ ಬದಲು ಪೋಲೀಸರಿಂದ (ಮತ್ತು ಗೂಂಡಾಪಡೆಗಳೂ ಸೇರಿ) ಕಾರ್ಮಿಕರ ಮೇಲೆ ಪ್ರಹಾರ. ಕಾರ್ಮಿಕರ ನ್ಯಾಯಯುತವಾದ ಮುಷ್ಕರಗಳನ್ನು ನಿಷೇಧಿಸುವ ಕ್ರಮ ಅವ್ಯಾಹತವಾಗಿ ನಡೆದುಬಂದಿದೆ. ಸರಕಾರದ ಕಾರ್ಮಿಕವಿರೋಧಿ ಕ್ರಮಗಳಿಂದಲಾಗಿ ಕಾನೂನಿನ ಅಲ್ಪಸ್ವಲ್ಪ ಪ್ರಯೋಜನವೂ ದೊರಕುವುದು ಕಷ್ಟವಾಗಿದೆ.

ಈ ಪರಿಸ್ಥಿತಿಯಲ್ಲಿ ವೇತನ ಮಟ್ಟವನ್ನು ಏರಿಸುವ ಆಜ್ಞೆ ಮಾಡುವುದರಿಂದ ಇದು ಪ್ರಾಯೋಗಿಕವಾಗಿ ಜಾರಿಯಾಗುವುದಿಲ್ಲ. ಬದಲು ಅಸಂಘಟಿತ ವಿಭಾಗವನ್ನು ಸಂಘಟಿಸಿ ತೀವ್ರವಾದ ಚಳುವಳಿಯನ್ನು ಬೆಳೆಸಬೇಕು. ಇದಕ್ಕೆ ಸಂಘಟಿತ ಕಾರ್ಮಿಕರ ಸಹಕಾರವೂ ದೊರೆಯುವಂತಾಗಬೇಕು. ಬೀಡಿ ಕೈಗಾರಿಕೆಯಲ್ಲಿ ಒಂದು ಮುಖ್ಯವಿಚಾರ-ಕಂಟ್ರಾಕ್ಟ್ ಪದ್ಧತಿ ರದ್ದಾಗಿ ನೇರ ಮಾಲಕ-ಕಾರ್ಮಿಕ ಸಂಬಂಧ ಬರುವಂತೆ ಮಾಡಬೇಕು. ಇವೆಲ್ಲಕ್ಕೂ ಚಳುವಳಿ, ಹೋರಾಟ ನಡೆಯಬೇಕು.

ಕಾರ್ಮಿಕ ಸಚಿವ ಶ್ರೀ ಪಾಟೀಲರು ಮತ್ತು ಕಾರ್ಮಿಕರ ಕಮೀಷನರ್ ಶ್ರೀ ಎ. ಡಿ. ಶೆಣ್ಣೆಯವರು ಹೇಳುವಂತೆ ಅಥವಾ ನಿರೀಕ್ಷಿಸುವಂತೆ ಕೈಗಾರಿಕಾ ಶಾಂತಿಯಾಗುವುದು ಮಾಲಕರ ಲಾಭಕ್ಕಾಗಿ ಮಾತ್ರ ; ಕಾನೂನು ಜಾರಿಗಾಗಿ ಅಲ್ಲ. ಹೀಗೆ ಆಗುವುದಕ್ಕೆ ಎಚ್ಚೆತ್ತುಕೊಳ್ಳುತ್ತಲಿರುವ ಕಾರ್ಮಿಕರು ಬಿಡುವುದೂ ಇಲ್ಲ. •

ಪರಿಸರ

ಭಾರತದ ಕಾರ್ಮಿಕ ಶಕ್ತಿಯಲ್ಲಿ ಶೇ. 16ರಷ್ಟು ಬಾಲಕಾರ್ಮಿಕರದ್ದೇ ಆಗಿದೆ.

—"ದಿ ಸ್ಟೇಟ್ಸ್‌ಮನ್"

ಬೆಂಗಳೂರು ನಗರಕ್ಕೆ ಬರುವ ತರಕಾರಿಯು ಮೂರುಹಂತದ ಸಗಟು ವ್ಯಾಪಾರಿಗಳ ಮತ್ತು ಎರಡು ಹಂತದ ಚಿಲ್ಲರೆ ವ್ಯಾಪಾರಿಗಳ ಕೈ ಬದಲಾಗಿ ಗ್ರಾಹಕರ ಕೈ ಸೇರುವ ಹೊತ್ತಿಗೆ ಅದರ ಬೆಲೆಯು ಐದು ಪಟ್ಟು ಹೆಚ್ಚಿರುತ್ತದೆ. ಕೇವಲ 20 ಪೈಸೆಗೆ 1 ಕೆ. ಜಿ. ಟೊಮೊಟೊ ಮಾರಬೇಕಾಗಿರುವ ರೈತ ಮತ್ತು ಒಂದು ರೂಪಾಯಿಗೆ 1 ಕೆ. ಜಿ. ಯಂತೆ ಕೊಳ್ಳಬೇಕಾಗಿರುವ ಸ್ಥಿತಿಯಲ್ಲಿರುವಂತಹ ಗ್ರಾಹಕರ ನಡುವಿನ ಭಾರಿ ಮೊತ್ತದ ಲಾಭಾಂಶವು ವ್ಯಾಪಾರಿಗಳದ್ದೇ ಆಗಿದೆ.

ಭಾರತೀಯ ಆಡಳಿತ ಶಿಕ್ಷಣ ಸಂಸ್ಥೆಯು ನಡೆಸಿದ ಅಧ್ಯಯನದ ವರದಿಯೊಂದರಿಂದ

ಯಾವ ಮಂತ್ರಿಯೂ ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಿಲ್ಲ. ಪ್ರತಿ ನಿರ್ಧಾರಕ್ಕೂ ಮುಖ್ಯಮಂತ್ರಿಗಳ ಛೋಟಾ ಸಹಿ ಅಗತ್ಯ. ಅದ್ದರಿಂದ ರಾಜ್ಯದ್ದು ಏಕ ಸದಸ್ಯ ಮಂತ್ರಿಮಂಡಲ.

ಭ್ರಷ್ಟರಾಜಕಾರಣಿ, ಭ್ರಷ್ಟ ಅಧಿಕಾರಿ ಮತ್ತು ಭ್ರಷ್ಟ ಕಂಟ್ರಾಕ್ಟರ್‌ಗಳು ರಾಜ್ಯವನ್ನು ಲೂಟಿ ಹೊಡೆಯುತ್ತಿದ್ದಾರೆ. ಈ ಕೂಟಕ್ಕೆ ಶ್ರೀ ದೇವರಾಜ ಅರಸು ಅವರು ಅಧ್ಯಕ್ಷರು.

—ಎಸ್.ಆರ್. ಬೊಮ್ಮಾಯಿ
(ಕರ್ನಾಟಕ ವಿಧಾನಸಭೆಯಲ್ಲಿ ವಿರೋಧಿ ನಾಯಕ)

ಮೂಲಭೂತ ಮಾನವೀಯ ಹಕ್ಕನ್ನೇ ರದ್ದುಪಡಿಸುವ ಮರಣದಂಡನೆಯ ಶಿಕ್ಷೆಯನ್ನು ನಾನು ಯಾವಾಗಲೂ ವಿರೋಧಿಸುತ್ತೇನೆ.

ಜಾರ್ಜ್‌ಫರ್ನಾಂಡೀಸ್

ಬಿಹಾರ ರಾಜ್ಯದಲ್ಲಿ ಕೊಲೆ, ಸುಲಿಗೆ, ದರೋಡೆಗಳು ಆಗದ ದಿವಸಗಳು ಇತ್ತೀಚೆಗಂತೂ ಒಂದೂ ಇಲ್ಲ.

—ಎ.ಕೆ. ರಾಯ್
(ಟ್ರೇಡ್ ಯೂನಿಯನ್ ನಾಯಕ)

ವ್ಯವಸ್ಥೆಯಲ್ಲಿನ ಮತ್ತು ಜೀವನದ ಮೌಲ್ಯಗಳು ಕಾಲ, ದೇಶಕ್ಕೆ ತಕ್ಕನಾಗಿ ಬದಲಾವಣೆ ಹೊಂದುವಂಥಹವುಗಳು ಮತ್ತು ಅವು ಸ್ಥಿರವಾದವುಗಳಲ್ಲ ಎಂದು ಬರಹಗಾರರು ಎತ್ತಿ ತೋರಿಸಬೇಕು.

"ಸುಧಾ"

ಐ. ಎ. ಎಸ್. ಅಧಿಕಾರಿಗಳು ತಮ್ಮ ಸುತ್ತ ಅದೆಷ್ಟು ಭದ್ರವಾದ ಕೋಟೆಯನ್ನು ಕಟ್ಟಿಕೊಂಡಿದ್ದಾರೆಂದರೆ ಅವರು ತಪ್ಪು ಮಾಡಿದರೂ ಸರ್ಕಾರ ಅವರ ಮೇಲೆ ಕ್ರಮತೆಗೆದುಕೊಳ್ಳಲು ಹಿಂದೇಟು ಹಾಕುತ್ತದೆ.

—ಸಿ.ಎಂ. ಆರ್ಮುಗಂ
(ಕರ್ನಾಟಕ ವಿಧಾನ ಸಭೆಯ ಆರ್.ಪಿ.ಐ. ನಾಯಕ)

• ಹೋರಾಟದ ಹಾದಿಯಲ್ಲಿ

ಬೆಂಗಳೂರಿನ ಹತ್ತಿ ಗಿರಣಿ ಕಾರ್ಮಿಕರು

ಕೇಂದ್ರ ಸರಕಾರದ ಒಡೆತನದಲ್ಲಿರುವ "ನ್ಯಾಷನಲ್ ಟೆಕ್ಸ್‌ಟೈಲ್ ಮಿಲ್ಸ್ ಕಾರ್ಪೊರೇಷನ್" ನಡೆಸುತ್ತಿರುವ, 'ಮೈಸೂರು ಮಿಲ್ಸ್ (ರಾಜಾ ಮಿಲ್ಸ್)', 'ಮಿನರ್ವಾ ಮಿಲ್ಸ್', ಮತ್ತು ಪ್ರೊಸೆಸಿಂಗ್ ಕಾರ್ಖಾನೆಗಳ ಸುಮಾರು ಏಳು ಸಾವಿರ ಕಾರ್ಮಿಕರು ಐಕ್ಯ ಹೋರಾಟ ನಡೆಸುತ್ತಿದ್ದಾರೆ.

ಕೇರಳ, ತಮಿಳುನಾಡು ರಾಜ್ಯಗಳಲ್ಲಿ ಇದೇ ಎನ್. ಟಿ. ಸಿ. ನಡೆಸುತ್ತಿರುವ ಮಿಲ್ಲುಗಳಲ್ಲಿನ ಕಾರ್ಮಿಕರಿಗೂ ಬೆಂಗಳೂರಿನ ಕಾರ್ಮಿಕರಿಗೂ ಸಂಬಳದಲ್ಲಿ ರೂ. 140ಕ್ಕೂ ಹೆಚ್ಚು ವ್ಯತ್ಯಾಸವಿದ್ದೆ.

ಕಳೆದ ಎರಡು ವರ್ಷಗಳಿಂದ ಸಿ.ಐ.ಟಿ.ಯು. ಕಾರ್ಮಿಕ ಸಂಘವು ಇಲ್ಲಿ ಹೆಚ್ಚಿಗೆ ಕೆಲಸ ಮಾಡುತ್ತಿದ್ದು, ಅದರ ನಾಯಕರಾದ ಕಾಂ. ವಿ.ಜಿ.ಕೆ. ನಾಯರ್ ಅವರ ಅಧ್ಯಕ್ಷತೆಯಲ್ಲಿರುವ "ಮೈಸೂರು ಮಿಲ್ಸ್ ಹತ್ತಿ ಗಿರಣಿ ಕಾರ್ಮಿಕರ ಸಂಘ"ವು ಮಹತ್ವಪೂರ್ಣ ಬದಲಾವಣೆ ತಂದಿದೆ.

ಕಳೆದ ಜನವರಿಯಲ್ಲಿ ಆಡಳಿತ ವರ್ಗದ ಜೊತೆ ಕೆಲವು ಕಾರ್ಮಿಕ ವಿರೋಧಿ ನಾಯಕರು ಕೇವಲ ಆರು ರೂಪಾಯಿ ಹೆಚ್ಚಳದ (ಐದು ವರ್ಷಕ್ಕೆ)ಒಂದು ಒಪ್ಪಂದವನ್ನು ಮಾಡಿ ಕಾರ್ಮಿಕರಿಗೆ ವಂಚನೆ ಮಾಡಿದ್ದಾರೆ.

ಆದರೆ ಹೆಚ್ಚಿನ "ಮಿನರ್ವ ಮಿಲ್ಸ್"ನ ಕಾರ್ಮಿಕರು ಈ ಒಪ್ಪಂದವನ್ನು ಒಪ್ಪದೆ, ಕಾಂ. ವಿ. ಜಿ. ಕೆ. ನಾಯರ್ ಅವರನ್ನು ಕಾನೂನು ಸಲಹೆಗಾರರನ್ನಾಗಿ ನೇಮಿಸಿ ಒಂದು ಹೋರಾಟ ಸಮಿತಿಯನ್ನು ರಚಿಸಿದ್ದಾರೆ.

ಮಿನರ್ವಾ ಮಿಲ್ಸ್‌ನ ಕಾರ್ಮಿಕರು ಹೋರಾಟ ಸಮಿತಿಯ ನೇತೃತ್ವದಲ್ಲಿ ಗೇಟ್ ಮೀಟಿಂಗ್ಸ್, ಹಾಗೂ ಮತಪ್ರದರ್ಶನಗಳನ್ನು ನಡೆಸುತ್ತಿದ್ದಾರೆ.

'ಮೈಸೂರು ಮಿಲ್ಸ್ ಲೇಬರ್ ಅಸೋಸಿಯೇಷನ್', 'ಮೈಸೂರು ಮಿಲ್ಸ್ ಹತ್ತಿಗಿರಣಿ ಕಾರ್ಮಿಕರ ಸಂಘ (ಸಿ.ಐ.ಟಿ.ಯು.)', 'ಟೆಕ್ಸ್‌ಟೈಲ್ಸ್ ಅಂಡ್ ಪ್ರೊಸೆಸಿಂಗ್ ಫ್ಯಾಕ್ಟರಿವರ್ಕರ್ಸ್ ಯೂನಿಯನ್ (ಎ.ಐ.ಟಿ.ಯು.ಸಿ.)', 'ಮಿನರ್ವಾ ಮಿಲ್ಸ್ ಕಾರ್ಮಿಕರ ಹೋರಾಟ ಸಮಿತಿ' ಈ ನಾಲ್ಕು ಸಂಘಗಳು ಒಟ್ಟು ಸೇರಿ ತಾ. 5-4-79 ರಂದು ಒಂದು ಜಂಟೀ ಹೋರಾಟ ಸಮಿತಿಯನ್ನು ರಚಿಸಿದೆ. ಈ ಸಮಿತಿಯ ನೇತೃತ್ವದಲ್ಲಿ ತಮ್ಮ ಕಾರ್ಮಿಕ ಹೋರಾಟವನ್ನು ಮುಂದುವರಿಸುವುದಾಗಿ ನಿರ್ಧರಿಸಿದ್ದಾರೆ. □

ಪ್ರಚಂಡ ವಿಜಯ

[1ನೇ ಪುಟದಿಂದ]

ಅಲ್ಲಿನ ಕಾರ್ಪೊರೇಷನ್ ಆಡಳಿತ ವಹಿಸಿಕೊಳ್ಳಲಿದೆ.

ಒರಿಸ್ಸಾದಲ್ಲೂ ವಿಜಯ

ಒಟ್ಟು 92 ಮುನಿಸಿಪಾಲಿಟಿಗಳಿಗಾದ ಒರಿಸ್ಸಾ ರಾಜ್ಯದಲ್ಲಿ 52 ಮುನಿಸಿಪಾಲಿಟಿಗಳಿಗೆ ಇತ್ತೀಚೆಗೆ ಚುನಾವಣೆ ನಡೆದು ಅದರಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು 3 ಮುನಿಸಿಪಾಲಿಟಿಗಳ ಅಧ್ಯಕ್ಷ ಸ್ಥಾನವನ್ನು ಗೆದ್ದಿದೆ. ಕಳೆದ ಬಾರಿ ಒಂದೇ ಒಂದು ಮುನಿಸಿಪಾಲಿಟಿ ಅಧ್ಯಕ್ಷಸ್ಥಾನ ಹಿಡಿದಿದ್ದ ಅದರ ಈ ಮುನ್ನಡೆಯು ಗಮನಾರ್ಹವಾದುದೆಂದು ಇಲ್ಲಿನ ರಾಜಕೀಯ ವಲಯಗಳಲ್ಲಿ ಅಭಿಪ್ರಾಯ ಪಡಲಾಗುತ್ತಿದೆ.

ಇತರ ರಾಜಕೀಯ ಪಕ್ಷಗಳಾದ ಜನತಾಕ್ಕೆ 19, ಇಂದಿರಾಕಾಂಗ್ರೆಸ್‌ಗೆ 18, ಸಿ. ಪಿ. ಐ. ಗೆ 1, ಸಿ. ಪಿ. ಐ. (ಎಂ. ಎಲ್.) ಗೆ 1, ಹಾಗೂ ಪಕ್ಷೇತರರು 9 ಸ್ಥಳಗಳಲ್ಲಿ ಮುನಿಸಿಪಾಲಿಟಿ ಅಧ್ಯಕ್ಷ ಗಾದಿಯನ್ನು ಹಿಡಿದಿದ್ದಾರೆ.

ಜನತಾ ಒಡೆದ ಮನೆ

ಈ ಚುನಾವಣೆಗಳಲ್ಲಿ ಜನತಾಪಕ್ಷದವರೇ ಪರಸ್ಪರ ಹೋರಾಡಿದ್ದರಿಂದಾಗಿ ಇಂದಿರಾಕಾಂಗ್ರೆಸ್ ಪಕ್ಷವು 18 ಮುನಿಸಿಪಾಲಿಟಿಗಳನ್ನು ಹಿಡಿಯಲು ಸಾಧ್ಯವಾಯಿತು. ಜನತಾಪಕ್ಷವು ಒಗ್ಗಟ್ಟಿನಿಂದ ಇದ್ದಿದ್ದರೆ ಮತ್ತು ಇತರೆ ಸರ್ವಾಧಿಕಾರಿ ವಿರೋಧಿ ಶಕ್ತಿಗಳೊಡನೆ ಕೈಗೂಡಿಸಿದ್ದರೆ ಇಂದಿರಾಕಾಂಗ್ರೆಸ್ಸಿಗೆ ಈ ಚುನಾವಣೆಗಳಲ್ಲಿ ಒಂದೇ ಒಂದು ಮುನಿಸಿಪಾಲಿಟಿಯನ್ನು ಹಿಡಿಯಲೂ ಸಾಧ್ಯವಾಗುತ್ತಿರಲಿಲ್ಲ ಎಂದು ಇಲ್ಲಿನ ರಾಜಕೀಯ ವೀಕ್ಷಕರು ಹೇಳುತ್ತಿದ್ದಾರೆ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24134